ಸಂಪುಟ 01 | ಸಂಚಿಕೆ 177 | ಗುರುವಾರ 21 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನ**

ಪ್ರತಿ ವರ್ಷ ಮೇ 21 ರಂದು ಭಾರತದಲ್ಲಿ ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನವನ್ನು ಆಚರಿಸಲಾಗುತ್ತದೆ. ಭಾರತದ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಪುಣ್ಯತಿಥಿಯ ನೆನಪಿಗಾಗಿ ಮತ್ತು ಯುವಜನರಲ್ಲಿ ಭಯೋತ್ಪಾದನೆ ಹಾಗೂ ಹಿಂಸಾಚಾರದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**2) ಅಂತರರಾಷ್ಟ್ರೀಯ ಚಹಾ ದಿನ**

ವಿಶ್ವದಾದ್ಯಂತ ಚಹಾದ ಸಾಂಸ್ಕೃತಿಕ ಪರಂಪರೆ, ಆರ್ಥಿಕ ಮಹತ್ವ ಮತ್ತು ಆರೋಗ್ಯ ಪ್ರಯೋಜನಗಳನ್ನು ಗುರುತಿಸಲು ಪ್ರತಿ ವರ್ಷ ಮೇ 21 ರಂದು ಅಂತರರಾಷ್ಟ್ರೀಯ ಚಹಾ ದಿನವನ್ನು ಆಚರಿಸಲಾಗುತ್ತದೆ

## ಸುಭಾಷಿತ

ಬದುಕು ಎನ್ನುವುದು ಒಂದು ಸುಂದರವಾದ ಕಲೆ. ಅದನ್ನು ಪ್ರೀತಿಯಿಂದ ಪ್ರೀತಿಸಿ, ಸಮಾಧಾನದಿಂದ ಸಾಗಿಸಿ. ನಿಮ್ಮ ನಗು ಇನ್ನೊಬ್ಬರ ಮುಖದಲ್ಲಿ ಮಂದಹಾಸ ಮೂಡಿಸಲಿ, ಅದೇ ನಿಜವಾದ ಜೀವನದ ಸಾರ್ಥಕತೆಯಿ

ಸಿದ್ದೇಶ್ವರ ಸ್ವಾಮೀಜಿ

ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# 35 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ

## ವಿದೇಶೀಯರು ಸೇರಿ 8 ಮಂದಿ ಬಂಧನ



ಬೆಂಗಳೂರು: ದೆಹಲಿಯಿಂದ ನಗರಕ್ಕೆ ಮಾದಕ ವಸ್ತುವನ್ನು ಕಡಿಮೆ ಬೆಲೆಗೆ ಖರೀದಿ ಮಾಡಿಕೊಂಡು ಬಂದು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದ ಮೂವರು ವಿದೇಶಿ ಪ್ರಜೆಗಳು ಸೇ-ರಿದಂತೆ ಎಂಟು ಮಂದಿಯನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿ 35 ಕೋಟಿ ರೂ. ಮೌಲ್ಯದ ಎಂಡಿಎಂಎ ವಶಪಡಿಸಿ ಕೊಂಡಿದ್ದಾರೆ.

ಬಂಧಿತರ ಪೈಕಿ ಮೂವರು ವಿದೇಶಿಗರು, ಮೂವರು ಹೊರರಾಜ್ಯದವರು ಹಾಗೂ ರಾಜ್ಯದ ಇನ್ನಿಬ್ಬರು ಸೇರಿದ್ದಾರೆ.ಪ್ರವಾಸಿ ವೀಸಾದಲ್ಲಿ ಭಾರತಕ್ಕೆ ಬಂದು ನಂತರ ನಗರದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆಗಳಾದ ಸೆನೆಗಲೀಸ್‌ನ ಡ್ಯಾನ್ಫಗೆರಾಲ್?ಡ ಅಲಿಯಾಸ್ ಡೇವಿಡ್, ಟಾಂಜೇನಿಯಾದ ಮ್ಯಾಗ್ರೆತ್ ಲಿಜಿನಿಕೋ ಚಾಲೆ ಮತ್ತು ಆರೋಗ್ಯ ಚಿಕಿತ್ಸೆ ವೀಸಾದಡಿ ಬಂದಿದ್ದ ಒಬಿಯಾನುಜು ರೀಟಾ ಒಕೆಕೆ ಅಲಿಯಾಸ್ ಸಾನಿಯಾ ಹಾಗೂ ದೆಹಲಿಯ ರೀನಾ, ದೆಬಾಶಿಶ್ ಅಲಿಯಾಸ್ ದೇಬು, ಧೀರಜ್ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಮೊಹಮದ್ ಮನ್ಸೂರು, ಬಂಟ್ವಾಳದ ಅಬ್ದುಲ್ ಸಾಮೇದ್ ಬಂಧಿತರು.

ಆನಂದನಗರದ ಉನ್ನತಿಲೇಔಟ್ ಮುಖ್ಯರಸ್ತೆಯ ಅಪಾರ್ಟ್‌ಮೆಂಟ್‌ವೊಂದರ ಮುಂಭಾಗ ಕಾರಿನಲ್ಲಿ ಮಹಿಳೆ ಸೇರಿದಂತೆ ಮೂವರು ಕುಳಿತು ಮಾದಕ ವಸ್ತು ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಪೊಲೀಸರಿಗೆ ಲಭಿಸಿದೆ. ಈ ಆಧಾರದ ಮೇಲೆ ಸ್ಥಳಕ್ಕೆ ದಾವಿಸಿದ ಪೊಲೀಸರು ಮಹಿಳೆ ಹಾಗೂ ಇನ್ನಿಬ್ಬರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ದೆಹಲಿಯ ಅಪರಿಚಿತ ವ್ಯಕ್ತಿಯಿಂದ ಮಾದಕ ವಸ್ತು ಎಂಡಿ-ಎಂಎ ಖರೀದಿಸಿಕೊಂಡು ಬಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದುದ್ದಾಗಿ ಹೇಳಿದ್ದಾರೆ. ಆರೋಪಿಗಳಿಂದ 4ಕೆಜಿ ಎಂಡಿ-ಎಂಎ, ಕೃತ್ಯಕ್ಕೆ ಬಳಸಿದ ಕಾರು, 4 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಮೂವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ನಗರದ ದೊಡ್ಡಕನ್ನಹಳ್ಳಿಯ ಚೂಡಸಂದ್ರದಲ್ಲಿರುವ ಆರೋಪಿಯೊಬ್ಬನ ವಾಸದ ಮನೆಯಲ್ಲಿ ಮಾದಕ ವಸ್ತು ಇಟ್ಟಿರುವುದಾಗಿ ತಿಳಿಸಿದ್ದು, ಪೊಲೀಸರು ಸ್ಥಳಕ್ಕೆ ತೆರಳಿ 10 ಕೆಜಿ 120 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ. ಆರೋಪಿಗಳು ನೀಡಿದ ಮಾಹಿತಿಯ ಮೇರೆಗೆ ಕಾರ್ಯಾಚರಣೆ ಮುಂದುವರೆಸಿದ ಪೊಲೀಸರು, ಮಾದಕ ವಸ್ತು ಸರಬರಾಜು ಮಾಡುತ್ತಿದ್ದ ವಿದೇಶದ ವ್ಯಕ್ತಿ ಹಾಗೂ ಇಬ್ಬರು ಮಹಿಳೆಯರು ಸೇ-ರಿದಂತೆ ಮೂವರನ್ನು ಹಾಗೂ ದೆಹಲಿ ಮೂಲದ ವ್ಯಕ್ತಿಯೊಬ್ಬನನ್ನು ಹರಿಯಾಣ ಹಾಗೂ ದೆಹಲಿಯಲ್ಲಿ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

ಆ ಸಂದರ್ಭದಲ್ಲಿ ಈ ಪ್ರಕರಣದಲ್ಲಿ ಮತ್ತೊಬ್ಬ ವ್ಯಕ್ತಿಯೂ ಭಾಗಿಯಾಗಿರುವುದಾಗಿ ತಿಳಿಸಿದ ಮೇರೆಗೆ ತನಿಖೆ ಮುಂದುವರೆಸಿದ ಪೊಲೀಸರು ಹೆಣ್ಣೂರಿನ ಆಸ್ಪತ್ರೆಯೊಂದರ ಬಳಿ ಮತ್ತೊಬ್ಬನನ್ನು ಬಂಧಿಸಿ ಆತನ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದ 3ಕೆಜಿ 200 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ. ಒಟ್ಟಾರೆ 8 ಮಂದಿ ಆರೋಪಿಗಳಿಂದ 35 ಕೋಟಿ ಮೌಲ್ಯದ ಎಂಡಿ-ಎಂಎ ವಶಪಡಿಸಿಕೊಳ್ಳುವಲ್ಲಿ ಇನ್?ಸಪೆಕ್ಟರ್ ಭೈರ ಹಾಗೂ ಸಿಬ್ಬಂದಿ ತಂಡ ಯಶಸ್ವಿಯಾಗಿದೆ.

## ರಾಜೀವ್ ಗಾಂಧಿ ಬಹುಗ್ರಾಮ ಕುಡಿಯುವ ನೀರಿನ ಸಮಸ್ಯೆ ಕೂಡಲೇ ಪರಿಹರಿಸುವಂತೆ ಕುಪ್ಪಿಗುಡ್ಡ ಗ್ರಾಮಸ್ಥರಿಂದ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು: ಕುಪ್ಪಿಗುಡ್ಡ ಗ್ರಾಮಕ್ಕೆ ಬಹುದಿನಗಳಿಂದ ರಾಜೀವ್ ಗಾಂಧಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಯಾಗಿದ್ದು, ಇತ್ತೀಚಿಗೆ 15 ದಿನಗಳಿಂದ ಕುಡಿಯುವ ನೀರಿನ ಸಮಸ್ಯೆಯಾಗಿದ್ದು, ಹೊನ್ನಳಿ ಗ್ರಾಮದಿಂದ ಗುಡದನಾಳ ಮಾರ್ಗವಾಗಿ ನೀರು ಬರುತ್ತಿತ್ತು ಈ ಸಮಸ್ಯೆಯಾಗಲು ಇತ್ತೀಚಿಗೆ 15ದಿನಗಳ ಹಿಂದೆ ಗುಡದನಾಳ ಗ್ರಾಮದಲ್ಲಿ ವಾಲ್ ಕೂಡಿಸಿದ್ದು, ಈ ವಾಲ್ ಕೂಡಿಸಿದ್ದರಿಂದ ನಮಗೆ ನೇರವಾಗಿ ಬರಬೇಕಾದ ನೀರು ಬರದೇ ಸಮಸ್ಯೆ ಯಾಗಿದೆ ಇದನ್ನು ಕೂಡಲೇ ಸರಿಪಡಿಸುವಂತೆ ಕುಪ್ಪಿಗುಡ್ಡದ ಗ್ರಾಮಸ್ಥರು ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು.

ಈ ವಿಷಯವನ್ನು ಮಸ್ಕಿ ಕ್ಷೇತ್ರದ ಶಾಸಕ ಬಸನಗೌಡ ತುರುವಿಹಾಳ ರವರು ನಮ್ಮ ಕುಪ್ಪಿಗುಡ್ಡ ಗ್ರಾಮಕ್ಕೆ ಖುದ್ದಾಗಿ ಭೇಟಿಕೊಟ್ಟು ಸಂಬಂಧಪಟ್ಟ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಉಪ ವಿಭಾಗ ಲಿಂಗಸಗೂರಿನ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಕುಪ್ಪಿಗಡ್ಡ ಗ್ರಾಮಕ್ಕೆ ಖುದ್ದಾಗಿ ಕರೆಯಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಈ ಕೂಡಲೇ ಸರಿಪಡಿಸುವಂತೆ ಸೂಚಿಸಿದ್ದರೂ ಕೂಡಾ ಇಲ್ಲಿಯವರೆಗೂ ಈ ಅಧಿಕಾರಿಗಳು ಸಮಸ್ಯೆಗೆ ಸ್ಪಂದಿಸುತ್ತಿಲ್ಲ, ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿದ್ದು ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಸಂಬಂಧಪಟ್ಟ ಇಂಜನೀಯರರವರಿಗೆ ಆದೇಶಿಸಿ ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆ ಸರಿಪಡಿಸಬೇಕು.

ಇಲ್ಲವಾದಲ್ಲಿ ಗ್ರಾಮಸ್ಥರು ತಮ್ಮ ಕಾರ್ಯಾಲಯದ ಮುಂದೆ ಉಗ್ರವಾದ ಹೋರಾಟವನ್ನು ಹಮ್ಮಿಕೊಳ್ಳಬೇಕಾಗುತ್ತದೆಂದು ಹೇಳಿದರು .ಈ ಸಂದರ್ಭದಲ್ಲಿ ಸುಭಾಷಚಂದ್ರ ಗೌಡೂರ್ , ಶರಣಬಸವ ಚಂದಪ್ಪ , ಮಹದೇವಪ್ಪ ಕೇಸರಿ , ದುರಗಣ್ಣ ನೆಲೋಗಿ , ಪ್ರಕಾಶ್ , ಹನುಮಂತ , ಶ್ರೀನಿವಾಸ್ , ಅಮರೇಶ್ , ವೆಂಕಟೇಶ್ , ಮೌನೇಶ್ , ಅಮರೇಶ್ , ಶಿವಕುಮಾರ್ , ಮಲ್ಲಯ್ಯ ಅಮರೇಗೌಡ ಸೇರಿದಂತೆ ಗ್ರಾಮಸ್ಥರು ಇದ್ದರು.

## ಮೇ.24ಕ್ಕೆ ಪ್ರತಿಷ್ಠಿತ ಶಾಲೆಗಳ ಪ್ರವೇಶ ಪರೀಕ್ಷೆ

❑ ನೈಜ್ಯ ದೆಸೆ ನ್ಯೂಸ್



ರಾಯಚೂರು: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಿಂದ 2026-276ನೇ ಸಾಲಿಗೆ ಪ್ರತಿಭಾವಂತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು 6ನೇ ತರಗತಿಗೆ ಪ್ರತಿಷ್ಠಿತ ಶಾಲೆಗಳಿಗೆ ದಾಖಲಿಸಲು ಆಸಕ್ತ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಪ್ರವೇಶ ಪರೀಕ್ಷೆಯು ಮೇ.24ಕ್ಕೆ ನಡೆಯಲಿದೆ.

ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವಂತೆ ಕೋರಲಾಗಿದೆ. ಪ್ರವೇಶ ಪರೀಕ್ಷೆಯು ಮೇ.24ರ ಭಾನುವಾರ ಬೆಳಿಗ್ಗೆ 10.30ಗಂಟೆಗೆ ನಗರದ ಬಾಲಕಿಂ-ಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಟೇಷನ್ ರಸ್ತೆ, ರಾಯಚೂರುನಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಆಯಾ ತಾಲೂಕಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿಗಳಿಂದ ಪ್ರವೇಶ ಪತ್ರಗಳನ್ನು ಕಳುಹಿಸಲಾಗಿದ್ದು,

ಒಂದು ವೇಳೆ ಪ್ರವೇಶ ಪತ್ರ ತಲುಪದೇ ಇದ್ದಲ್ಲಿ ಪರೀಕ್ಷೆಯ ಒಂದು ದಿನ ಮೊದಲು ಈ ಕಚೇರಿಯಿಂದ ಪ್ರವೇಶ ಪತ್ರದ ಎರಡನೇ ಪ್ರತಿಯನ್ನು ಪಡೆದುಕೊಂಡು 5ನೇ ತರಗತಿ ಅಂಕಪಟ್ಟಿಯೊಂದಿಗೆ ಪರೀಕ್ಷೆಯ ದಿನದಂದು ಬೆಳಿಗ್ಗೆ 9.30 ಗಂಟೆಯೊಳಗೆ ಪರೀಕ್ಷೆ ನಡೆಯುವ ಸ್ಥಳದಲ್ಲಿ ಹಾಜರಾಗಬೇಕೆಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾ-ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಬಕಾರಿ ಇಲಾಖೆಯಿಂದ ದಾಳಿ: 10 ಲೀ. ಕಲಬೆರೆಕೆ ಸೇಂದಿ, ಸಿಹೆಚ್ ಪೌಡರ್ ವಶಕ್ಕೆ

❑ ನೈಜ್ಯ ದೆಸೆ ನ್ಯೂಸ್




ರಾಯಚೂರು: ರಾಯಚೂರು ನಗರದ ಸಿಯತಲಾಬ್ ಏರಿಯಾದ ಪಕೀರಮ್ಮ ಎಂಬುವವರ ಮನೆ ಮೇಲೆ ಇತ್ತೀಚಿಗೆ ಅಬಕಾರಿ ಇಲಾಖೆಯಿಂದ ದಾಳಿ ಮಾಡಿದಾಗ ಈ ಆರೋಪಿತಳ ಮನೆಯಲ್ಲಿ 10 ಲೀ. ಕಲಬೆರೆಕೆ ಸೇಂದಿ ಮತ್ತು 3,500ಕಿ,ಜಿ ನಷ್ಟು ಸಿಹೆಚ್ ಪೌಡರ್ ಸಂಗ್ರಹಿಸಿ ಮಾರಾಟ ಮಾಡುವ ಕಂಡುಬಂದಿದ್ದು,

ಆರೋಪಿತಳ ವಿರುದ್ಧ ಅಬಕಾರಿ ವಲಯ ನಿರೀಕ್ಷಕರಿಂದ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ. ದಾಳಿಯಲ್ಲಿ ಅಬಕಾರಿ ಉಪ ನಿರೀಕ್ಷಕ ಸಣ್ಣ ಮಾರುತಿ, ಅಬಕಾರಿ ಉಪ ನಿರೀಕ್ಷಕ-01 ಅಮೃತ ಬಿಂದು, ಅಬಕಾರಿ ಪೇದೆ ತಿರುಪತಿ, ಗೃಹ ರಕ್ಷಕರಾದ ಚಂದ್ರಶೇಖರ, ನರೇಂದ್ರ, ಮಲ್ಲಮ್ಮ ಅವರು ಭಾಗಿಯಾಗಿದ್ದರು ಎಂದು ಅಬಕಾರಿ ಇಲಾಖೆಯ ಪ್ರಕಟಣೆ ತಿಳಿಸಿದೆ.

## ದೇವಿಯ ಅರ್ಚಕರಾದ ಅಮರಯ್ಯ ಸ್ವಾಮಿ ಕಾರುಣ್ಯ ಆಶ್ರಮವನ್ನು ಹುಟ್ಟು ಹಾಕಿದ್ದು ಇತಿಹಾಸ :ಶಿವರಡ್ಡಿ ನಾಯಕ ವಕೀಲರು

❑ ನೈಜ್ಯ ದೆಸೆ ನ್ಯೂಸ್



ಸಿಂಧನೂರು: ಕಾರಟಗಿ ತಾಲೂಕಿನ ವಾಲ್ಮೀಕಿ ಸಮಾಜದ ಧರ್ಮದರ್ಶಿಗಳಾದ ಗದ್ದೆಪ್ಪ ನಾಯಕ ಹಾಗೂ ವಕೀಲರಾದ ಶಿವರೆಡ್ಡಿ ನಾಯಕ ಸಿಂಧನೂರು ನಗರದ ಕಾರುಣ್ಯ ಆಶ್ರಮಕ್ಕೆ ಭೇಟಿ ನೀಡಿ ಆಶ್ರಮದ ಸೇವೆಯನ್ನು ಸಂಪೂರ್ಣವಾಗಿ ಅರಿತುಕೊಂಡು ಆಶ್ರಯದಾತರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಆತ್ಮಸ್ಥೈರ್ಯ ತುಂಬಿ ಕಾರುಣ್ಯ ಸಂಸ್ಥೆಯ ಸೇವೆಯ ಬಗ್ಗೆ ಹಲವಾರು ಮೆಚ್ಚುಗೆಯ ಮಾತುಗಳನ್ನಾಡಿದರು.

ಈ ಸಮಯದಲ್ಲಿ ವಕೀಲರಾದ ಶಿವರೆಡ್ಡಿ ನಾಯಕ ಹಾಗೂ ಕಾರಟಗಿ ತಾಲೂಕಿನ ವಾಲ್ಮೀಕಿ ಸಮಾಜದ ಧರ್ಮದರ್ಶಿಗಳಾದ ಗದ್ದೆಪ್ಪ ನಾಯಕ ಇವರುಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿ ಶಿವರಡಿ ನಾಯಕ ವಕೀಲರು ಮಾತನಾಡಿ ನಾವು ಸುಮಾರು ವರ್ಷಗಳಿಂದ ಕಾರುಣ್ಯ ಆಶ್ರಮದ ಸೇವೆಯ ಬಗ್ಗೆ ಅಲ್ಲಿನ ಸ್ಥಿತಿಯ ಬಗ್ಗೆ ಕೇಳುತ್ತಿದ್ದೆವು. ಆದರೆ ಇಂದು ವಾಸ್ತವ ಸ್ಥಿತಿಯಲ್ಲಿ ನೋಡಿದಾಗ ಯಾವುದೋ ಒಂದು ವಿಚಿತ್ರ ಜಗತ್ತಿಗೆ ಬಂದಿದ್ದೇವೆ ಎಂದೆನಿಸುತ್ತಿದೆ. ಇಂತಹ ಸೇವೆಗೆ ಸರ್ಕಾರ ಸಹಕರಿಸಿದರೆ ಸಮಾಜ-ಕ್ಕೆ ಇನ್ನೂ ಹೆಚ್ಚಿನ ಸೇವೆ ದೊರೆಯುತ್ತದೆ.

ಮನುಷ್ಯನ ಮಾನವೀಯತೆಯ ಪಾಠಶಾಲೆ ನಮ್ಮ ಕಾರುಣ್ಯ ಅಶ್ರಮವಾಗಿದೆ. ಈ ಆಶ್ರಮಕ್ಕೆ ಒಮ್ಮೆ ಭೇಟಿ ನೀಡಿದರೆ ಮನುಷ್ಯನಿಲ್ಲಿರುವ ಅಹಂಕಾರ ಗರ್ವ ಮದ ಮತ್ಸರ ಅಳಿಯುತ್ತದೆ. ನಾವು ಏನಾದರೂ ಕೊಟ್ಟರೆ ಒಂದು ದಿನ ಮಾತ್ರ ಕೊಡಬಹುದು ಆದರೆ ನಿರಂತರವಾಗಿ ದಿನಂಪ್ರತಿ ಇಂತಹ ಸಂಸ್ಥೆಯನ್ನು ನಡೆಸುವುದು ಸುಲಭದ ಮಾತಲ್ಲ. ಸಿಂಧನೂರು ತಾಲೂಕಿನ ಹರೇಟನೂರು ಗ್ರಾಮದ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಯ ಅರ್ಚಕರಾದ ಅಮರಯ್ಯ ಸ್ವಾಮಿ ಕಾರುಣ್ಯ ಆಶ್ರಮವನ್ನು ಆಗಿದ್ದು ಇತಿಹಾಸ ಮತ್ತು ಅವರ ಕುಟುಂಬದ ಎಲ್ಲಾ ಸದಸ್ಯರು ಇದು ಸೇವೆ ಎಲ್ಲ ಕರ್ತವ್ಯ ಎನ್ನುವ ರೀತಿಯಲ್ಲಿ ಆಶ್ರಮವನ್ನು ನಡೆಸಿಕೊಂಡು ಹೋಗುವುದು ಅಚ್ಚರಿಯನ್ನುಂಟು ಮಾಡಿದೆ.

ಒಮ್ಮೆ ಸಚಿವರಾದ ಶಿವರಾಜ ತಂಗಡಿ-ಗಿಯವರನ್ನು ಆಶ್ರಮಕ್ಕೆ ಭೇಟಿ ನೀಡುವುದಾಗಿ ನಾವೆಲ್ಲರೂ ಕೂಡ ತಿಳಿಸುತ್ತೇವೆ. ಆಶ್ರಮಕ್ಕೆ ಮೂಲ ಬೇಡಿಕೆಯಾದ ಸ್ವಂತ ಜಾಗ ಆದ-ಷ್ಟು ಬೇಗನೆ ಲಭಿಸಲಿ ಎನ್ನುವುದು ನಮ್ಮ ಪ್ರಾರ್ಥ-ನೆಯಾಗಿದೆ ಎಂದು ಮಾತನಾಡಿ ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಈ ಸಮಯದಲ್ಲಿ ಗದ್ದೆಪ್ಪ ನಾಯಕ ಧರ್ಮದರ್ಶಿಗಳು ವಾಲ್ಮೀಕಿ ಸಮಾಜ ಕಾರಟಗಿ ತಾಲೂಕ. ನಾಗರಾಜ ಸ್ವಾಮಿಗಳು ಖ್ಯಾತ ಪಂಡಿತರು ಸಿಂಧನೂರು.

ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಶ್ರೀ ಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮೀನಾಕ್ಷಮ್ಮ.ಲಕ್ಷ್ಮೀ ಶರಣು ಸ್ವಾಮಿ ಅನೇಕರು ಉಪಸ್ಥಿತರಿದ್ದರು

## ಸಾಹಿತ್ಯ ಸಿಂಚನ

ನಗು

ನಗು ಒಂದು ಮಂತ್ರದಂತೆ
ಮನದ ನೋವನ್ನು ಮರೆಯಿಸುವಂತೆ
ಮೌನದಲ್ಲೂ ಮಾತಾಡುವ
ಮಧುರ ಭಾಷೆಯಂತೆ...

ನಗು ಬಂದರೆ ಬೆಳಕು ಬರುತ್ತದೆ
ಕತ್ತಲೆಯೂ ದೂರ ಓಡುತ್ತದೆ
ಒಂದು ಸಣ್ಣ ನಗುವಿನಿಂದಲೇ
ಜೀವನ ಹೊಸದಾಗಿ ಮೂಡುತ್ತದೆ...

ಕೋಪದ ಮಳೆಯ ತೊಳೆದು
ಸಂತೋಷದ ಇಂದ್ರಧನುಷ್ ಬಿಡಿಸುವುದು
ಹೃದಯಗಳ ನಡುವೆ ಸೇತುವೆ ಕಟ್ಟುವ
ಅದ್ಭುತ ಶಕ್ತಿ ? ನಗು...

ನಗುವನ್ನು ದಾನವಾಗಿ ಕೊಡು
ಯಾರಾದರೂ ಮನ ಹಸನಾಗಲಿ
ನಿನ್ನ ನಗು ಲೋಕವನ್ನೇ
ಸುಂದರವಾಗಿ ಮಾಡಲಿ?

**ದುರ್ಗೇಶ್ ಹೆಚ್**

# ಜೆಸ್ಕಾಂ ಇಲಾಖೆ ನಿರ್ಲಕ್ಷ್ಯ: ಜಾಲಹಳ್ಳಿ ಹೋಬಳಿ ಹಾಗೂ ಸೋಮನಮರಡಿ ಸುತ್ತಮುತ್ತ ವಿದ್ಯುತ್ ಸರಬರಾಜು ಅಸ್ತವ್ಯಸ್ತ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಜೆಸ್ಕಾಂ ಇಲಾಖೆ ಕಚೇರಿಯಲ್ಲಿ ಕರ್ನಾಟಕ ರಾಜ್ಯ ರೈತ ಸೇನೆ ಹಾಗೂ ರೈತ ಸಂಘದ ವತಿಯಿಂದ ಜೆಸ್ಕಾಂ ಇಲಾಖೆಯ ನಿರ್ಲಕ್ಷ್ಯ ಖಂಡಿಸಿ ಮನವಿ ಪತ್ರವನ್ನು ಜಾಲಹಳ್ಳಿ ಜೆಸ್ಕಾಂ ಇಲಾಖೆ ಎಇ (ಇಂಜಿನಿಯರ್) ಅವರಿಗೆ ಸಲ್ಲಿಸಲಾಯಿತು.**



ಜಾಲಹಳ್ಳಿ ಹೋಬಳಿ, ಸೋಮನಮರಡಿ, ಬೊಮ್ಮನಹಳ್ಳಿ ಸೇರಿದಂತೆ ಸುತ್ತಮುತ್ತ ಗ್ರಾಮಗಳಿಗೆ ಸಮರ್ಪಕ ವಿದ್ಯುತ್ ಸರಬರಾಜು ಆಗುತ್ತಿಲ್ಲ ಎಂದು ಆರೋಪಿಸಿದ ರೈತ ಮುಖಂಡರು, ಪ್ರತಿದಿನ ಐದರಿಂದ ಎಂಟು ಬಾರಿ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾತ್ರಿ ವೇಳೆ ವಿದ್ಯುತ್ ಕಡಿತವಾದರೆ ದೀರ್ಘ ಸಮಯದವರೆಗೆ ಮರು ಸಂಪರ್ಕವಾಗುತ್ತಿಲ್ಲ ಎಂದು ಸಾರ್ವಜನಿಕರು ದೂರಿದರು. ಬೇಸಿಗೆ ಸಮಯದಲ್ಲಿ ವಿದ್ಯುತ್ ಸಮಸ್ಯೆಯಿಂದ ಜನರು ಹಾಗೂ ರೈತರು ಸಂಕಷ್ಟ ಅನುಭವಿಸುತ್ತಿದ್ದು, ಜಾಲಹಳ್ಳಿ ಸಬ್‌ಸ್ಟೇಷನ್‌ನಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳು ಹಾಗೂ ಸಣ್ಣಪುಟ್ಟ ರಿಪೇರಿ ಸಾಮಗ್ರಿಗಳು ಸಹ ಲಭ್ಯವಿಲ್ಲವೆಂದು ಸಾರ್ವಜನಿಕರು ಆರೋಪಿಸಿದರು. ಪ್ರತಿಯೊಂದು ಸಮಸ್ಯೆಗೆ ದೇವದುರ್ಗ ಅಥವಾ ರಾಯಚೂರು ಅಧಿಕಾರಿಗಳನ್ನು ಕಾರಣ ಹೇಳಿ ತಪ್ಪಿಸಿಕೊಳ್ಳುತ್ತಿರುವುದು ಇಲಾಖೆಯ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಕುರಿತು ಮಾತನಾಡಿದ ರೈತ ಸಂಘದ ತಾಲೂಕು ಅಧ್ಯಕ್ಷ ಮಹದೇವಪ್ಪ ಯಾದವ್, "ಇದೇ ರೀತಿಯಲ್ಲಿ ಪದೇಪದೇ ವಿದ್ಯುತ್ ವ್ಯತ್ಯಯ ಮುಂದುವರಿದರೆ ದೇವದುರ್ಗ ಜೆಸ್ಕಾಂ ಕಚೇರಿ ಮುಂದೆ ಬೃಹತ್ ಧರಣಿ ನಡೆಸಲಾಗುವುದು" ಎಂದು ಎಚ್ಚರಿಸಿದರು. ಬೊಮ್ಮನಹಳ್ಳಿ ಗ್ರಾಮದ ಮುಖಂಡ ಯಮನೂರಪ್ಪ ನಾಯಕ್ ಕರ್ನಾಳ ಮಾತನಾಡಿ, ಗಾಣದಾಳ್ ಹಾಗೂ ಜಾಲಹಳ್ಳಿ ಸಬ್‌ಸ್ಟೇಷನ್ ಎಇ ಅಧಿಕಾರಿಗಳ ತಾರತಮ್ಯದಿಂದ ಜಾಲಹಳ್ಳಿ ಹೋಬಳಿ, ಸೋಮನಮರಡಿ ಹಾಗೂ ಬೊಮ್ಮನಹಳ್ಳಿ ಸುತ್ತಮುತ್ತ ಗ್ರಾಮಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಆಗುತ್ತಿಲ್ಲ ಎಂದು ಆರೋಪಿಸಿದರು.

ವಿದ್ಯುತ್ ಸಮಸ್ಯೆಯಿಂದ ಕುಡಿಯುವ ನೀರಿನ ವ್ಯವಸ್ಥೆಗೂ ತೊಂದರೆ ಉಂಟಾಗಿದ್ದು, ತಕ್ಷಣ ಸಮಸ್ಯೆ ಪರಿಹರಿಸದಿದ್ದರೆ ತಾಲೂಕು ಜೆಸ್ಕಾಂ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸೇನೆ ಹಾಗೂ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಮಹದೇವಪ್ಪ ಯಾದವ್, ಬೊಮ್ಮನಹಳ್ಳಿ ಗ್ರಾಮದ ಮುಖಂಡ ಯಮನೂರಪ್ಪ ನಾಯಕ್ ಕರ್ನಾಳ, ತಾಲೂಕು ಅಧ್ಯಕ್ಷ ಸೋಮನಾಥ್ ಪೂಜಾರಿ, ದೇವಪ್ಪ ಬಂಡಿ, ಶಂಕರಗೌಡ ಸೇರಿದಂತೆ ವಿವಿಧ ಗ್ರಾಮ ಘಟಕದ ಪದಾಧಿಕಾರಿಗಳು ಹಾಗೂ ಜಾಲಹಳ್ಳಿ, ಬೊಮ್ಮನಹಳ್ಳಿ, ಸೋಮನಮರಡಿ ಸೇರಿದಂತೆ ಸುತ್ತಮುತ್ತ ಗ್ರಾಮಗಳ ಸಾರ್ವಜನಿಕರು ಭಾಗವಹಿಸಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಕೋರ್ಟ್ ಆವರಣದಲ್ಲೇ ಕುಸಿದು ಬಿದ್ದು 26 ವರ್ಷದ ಯುವ ವಕೀಲ ಹೃದಯಾಘಾತದಿಂದ ನಿಧನ

ನೈಜ್ಯ ದೆಸೆ ನ್ಯೂಸ್

**ಕೊಪ್ಪಳ / ಗಂಗಾವತಿ: ನ್ಯಾಯಾಲಯದ ಆವರಣದಲ್ಲಿ ವಕೀಲರೊಬ್ಬರು ದಿಢೀರ್ ಕುಸಿದು ಬಿದ್ದು, ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ನಡೆದಿದೆ. ಕನಕಗಿರಿ ತಾಲೂಕಿನ ಚಿಕ್ಕಮಾದಿಹಾಳ ಗ್ರಾಮದ ನಿವಾಸಿಯಾದ 26 ವರ್ಷದ ಯುವ ವಕೀಲ ಕನಕೇಶ್ ಮುರುಡಿ ಮೃತಪಟ್ಟ ದುರ್ದೈವಿಯಾಗಿದ್ದಾರೆ.**



ಎಂದಿನಂತೆ ಕೋರ್ಟ್ ಕಲಾಪಗಳಿಗಾಗಿ ನ್ಯಾಯಾಲಯಕ್ಕೆ ಆಗಮಿಸಿದ್ದ ಕನಕೇಶ್ ಅವರು ಆವರಣದಲ್ಲಿದ್ದಾಗಲೇ ದಿಢೀರ್ ಕುಸಿದು ಬಿದ್ದಿದ್ದಾರೆ. ತಕ್ಷಣವೇ ಅಲ್ಲಿದ್ದ ಸಹೋದ್ಯೋಗಿ ವಕೀಲರು ಅವರನ್ನು ಆಸ್ಪತ್ರೆಗೆ ಸಾಗಿಸಲು ಯತ್ನಿಸಿದರಾದರೂ, ಮಾರ್ಗ ಮಧ್ಯದಲ್ಲೇ ಅವರು ಕೊನೆಯುಸಿರೆಳೆದಿದ್ದಾರೆ. ಮೃತ ಕನಕೇಶ್ ಅವರು ಹಿರಿಯ ವಕೀಲರಾದ ಹೆಚ್.ಎಮ್. ಮಂಜುನಾಥ್ ಅವರ ಬಳಿ ವೃತ್ತಿ ಅಭ್ಯಾಸ ಮಾಡುತ್ತಿದ್ದರು. ಇವರ ಅಕಾಲಿಕ ನಿಧನಕ್ಕೆ ಆಪ್ತ ಗೆಳೆಯ ಆನಂದ ದೇವರಮನಿ ಹಾಗೂ ಗಂಗಾವತಿ ವಕೀಲರ ಸಂಘ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ಇಂತಹ ಪ್ರಕರಣಗಳು ಕಾಣಿಸಿಕೊಳ್ಳುತ್ತಿರುವುದರಿಂದ ಸಾರ್ವಜನಿಕರು ಆತಂಕ ಪಡದೆ, ವೃತ್ತಿ ಜೀವನದ ಒತ್ತಡದ ನಡುವೆಯೂ ನಿಯಮಿತ ಆರೋಗ್ಯ ತಪಾಸಣೆ, ಸರಿಯಾದ ಜೀವನಶೈಲಿ ಹಾಗೂ ದೈಹಿಕ ಶ್ರಮದ ಕಡೆಗೆ ಗಮನ ಹರಿಸಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ವೈದ್ಯಕೀಯ ತಜ್ಞರು ಈ ಸಂದರ್ಭದಲ್ಲಿ ಸಲಹೆ ನೀಡಿದ್ದಾರೆ.

ವರದಿ: ಜಿಲಾನಸಾಬ್ ಬಡಿಗೇರ್

# "ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಉಲ್ಬಣಗೊಂಡಿದೆ"

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಸಮೀಪದ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಕೆರೆಗಳನ್ನು ನಿರ್ಮಿಸಲಾಗಿದೆ. ತುಂಗಭದ್ರಾ ಎಡದಂಡೆ ಕಾಲುವೆಯಿಂದ ಕೆರೆಗಳಿಗೆ ನೀರು ಭರ್ತಿ ಮಾಡಲಾಗುತ್ತದೆ. ನಿರ್ವಹಣೆ ಕೊರತೆ, ಪದೇ ಪದೇ ಪೈಪ್‌ಲೈನ್ ಹಾಳಾಗುವುದು, ಮತ್ತಿತರ ತಾಂತ್ರಿಕ ಸಮಸ್ಯೆಗಳಿಂದ ಕೆಲವು ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಸಾಮಾನ್ಯವಾಗಿದೆ. ವಿಶೇಷವಾಗಿ ಬೇಸಿಗೆಯಲ್ಲಿ ನೀರಿಗಾಗಿ ನಿತ್ಯ ಪರದಾಡುವ ಪರಿಸ್ಥಿತಿ ಉಂಟಾಗುತ್ತದೆ.**



ಮಸ್ಕಿ ತಾಲ್ಲೂಕಿನ ವಟಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇರಕಲ್ ಗ್ರಾಮದಲ್ಲಿ ನಿರ್ಮಿಸಿದ ಕೆರೆಯಿಂದ ಅಮೀನಗಡ, ವಟಗಲ್ ಮತ್ತು ಪಾಮನಕಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಿಗೆ ನೀರು ಪೂರೈಸಬೇಕಿದೆ. ಪಂಚಾಯಿತಿ ಕೇಂದ್ರ ಸ್ಥಾನ ಮತ್ತು ಕೆಲವು ಹಳ್ಳಿಗಳಿಗೆ ಹೊರತುಪಡಿಸಿ, ಬಹುತೇಕ ಹಳ್ಳಿಗಳಿಗೆ ಕೆರೆ ನೀರು ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ. ಅಮೀನಗಡ ಗ್ರಾಮದಲ್ಲಿ ಎರಡು ದಿನಗಳಿಗೊಮ್ಮೆ ಕುಡಿಯುವ ನೀರು ಪೂರೈಸಲಾಗುತ್ತಿದೆ. ಕೆರೆ ನೀರು ಸರಬರಾಜು ಸ್ಥಗಿತವಾದರೆ, ಊರಿನ ಕೆಳ ಭಾಗದಲ್ಲಿ ಮತ್ತು ಹಿಂದಿನ ಓಣಿಯಲ್ಲಿ ನೀರಿನ ಸಮಸ್ಯೆ ತೀವ್ರವಾಗುತ್ತದೆ.

ಊರ ಹೊರಗಿನ ಗದ್ದುಗೆ ಹತ್ತಿರ ನಿರ್ಮಿಸಿದ ನೀರಿನ ತೊಟ್ಟಿಯಿಂದ ಸೈಕಲ್ ಮತ್ತು ತಳ್ಳು ಬಂಡಿಗಳಲ್ಲಿ ನೀರು ತರಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಹಿಂದಿನ ಓಣಿ ಸ್ವಲ್ಪ ಎತ್ತರದ ಪ್ರದೇಶವಾಗಿದ್ದು, ಇದೇ ವಿಷಯ ನೀರಿನ ಸಮಸ್ಯೆಗೆ ಪ್ರಮುಖ ಕಾರಣವಾಗಿದೆ. ತೊಟ್ಟಿ ನಿರ್ಮಿಸಿ ನೀರು ಪೂರೈಸಬೇಕು ಎಂದು ಭೀಮಪ್ಪ ಇಟಗಿ, ಈರಪ್ಪ ನಾಯಕ, ಮಂಜುನಾಥ ಸಾಗರ, ಹುಚ್ಚಪ್ಪಗೌಡ, ಮಲ್ಲಪ್ಪ, ಅಬ್ದುಲ್ ಮತ್ತು ಶರಣಪ್ಪ ಆಗ್ರಹಿಸಿದರು.

'ಎತ್ತರದ ಗುಡ್ಡ ಪ್ರದೇಶದಲ್ಲಿನ ಯತಗಲ್ ಗ್ರಾಮಕ್ಕೆ ಕೆರೆ ನೀರು ಪೂರೈಕೆ ಸವಾಲಾಗಿದೆ. ಅಮೀನಗಡ ಗ್ರಾಮದಲ್ಲಿ ತೊಟ್ಟಿ ನಿರ್ಮಿಸಿ, ಅದರಲ್ಲಿ ನೀರು ಸಂಗ್ರಹ ಮಾಡಿ, ಯತಗಲ್‌ಗೆ ಪೂರೈಸುವ ವ್ಯವಸ್ಥೆ ಮಾಡಿದ್ದರೂ ನೀರು ಪೂರೈಕೆಯಲ್ಲಿ ನಿರಂತರ ವ್ಯತ್ಯಯ ಉಟಾಗುತ್ತದೆ' ಎಂದು ಗ್ರಾಮಸ್ಥರು ಆರೋಪಿಸಿದರು. ಗ್ರಾಮದ ಹಿಂದಿನ ಓಣಿಗೆ ಸಮರ್ಪಕ ನೀರು ಪೂರೈಕೆಯಾಗುತ್ತಿಲ್ಲ. ಈ ಬಗ್ಗೆ ಸ್ಥಳೀಯ ಆಡಳಿತ ತುರ್ತು ಗಮನಹರಿಸಬೇಕು.

-: ರಶೀದ್ ಬಂಕದ, ಅಮೀನಗಡ ನಿವಾಸಿ

# ಗುರುಗಳ ಮಾರ್ಗದರ್ಶನದಿಂದಲೇ ವಿದ್ಯಾರ್ಥಿಗಳ ಯಶಸ್ಸು: ಎ.ಎಂ. ಮುಲ್ಲಾ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ವಿದ್ಯಾರ್ಥಿಗಳ ಸಾಧನೆಯ ಹಿಂದೆ ಶಿಕ್ಷಕರ ತ್ಯಾಗ, ಮಾರ್ಗದರ್ಶನ ಮತ್ತು ಪ್ರೇರಣೆಯ ಮಹತ್ವ ಅಪಾರವಾಗಿದೆ. ಗುರಿಯಿಲ್ಲದ ಜೀವನ ಗೋರಿಗೆ ಸಮಾನವಾಗಿದ್ದು, ವಿದ್ಯಾರ್ಥಿಗಳು ತಮ್ಮ ಕನಸುಗಳಿಗೆ ಅನುಗುಣವಾಗಿ ಸ್ಪಷ್ಟ ಗುರಿ ಹೊಂದಿ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎಂದು ಪಟ್ಟಣದ ಖ್ಯಾತ ವೈದ್ಯರು ಹಾಗೂ ಸಂಸ್ಥೆಯ ಅಧ್ಯಕ್ಷರಾದ ಎ.ಎಂ. ಮುಲ್ಲಾ ಹೇಳಿದರು.**




ಪಟ್ಟಣದ ಸಿಟಿ ಕ್ಲೀನಿಕ್ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಅವರ ಸಾಧನೆಗೆ ಕಾರಣರಾದ ಶಿಕ್ಷಕರಿಗೆ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. "ವಿದ್ಯಾರ್ಥಿಗಳು ಯಾವ ಕ್ಷೇತ್ರದಲ್ಲೇ ಸಾಧನೆ ಮಾಡಿದರೂ ಅದರ ಹಿಂದೆ ಗುರುಗಳ ಪರಿಶ್ರಮ ಅಡಗಿರುತ್ತದೆ. ಶಿಕ್ಷಕರ ಮಾರ್ಗದರ್ಶನವನ್ನು ಗೌರವಿಸಿ ಆತ್ಮವಿಶ್ವಾಸದಿಂದ ನಿರಂತರ ಪರಿಶ್ರಮಪಟ್ಟರೆ ಯಶಸ್ಸು ಖಚಿತ," ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಕಿ ಸುಜಾತಾ ಭೋಸ್ಲೆ ಮಾತನಾಡಿ, "ಒಂದು ಶಿಕ್ಷಣ ಸಂಸ್ಥೆ ಉನ್ನತ ಮಟ್ಟಕ್ಕೆ ಬೆಳೆಯಬೇಕಾದರೆ ಆಡಳಿತ ಮಂಡಳಿಯ ದೂರದೃಷ್ಟಿಯ ಜೊತೆಗೆ ಶಿಕ್ಷಕರ ಜವಾಬ್ದಾರಿತನವೂ ಮುಖ್ಯ. ಶಿಕ್ಷಣವೆಂದರೆ ಕೇವಲ ಪಾಠ ಹೇಳುವುದಲ್ಲ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಹತ್ತರ ಕಾರ್ಯ," ಎಂದು ಅಭಿಪ್ರಾಯಪಟ್ಟರು. ಅವರು ಮುಂದುವರಿದು, ದಿ ಆರ್ಕ್ ಎಂಜಿಲ್ ಇಂಗ್ಲೀಷ್ ಮಿಡಿಯಮ್ ಹೈಸ್ಕೂಲ್ ಶೈಕ್ಷಣಿಕ ಗುಣಮಟ್ಟ, ಶಿಸ್ತು ಹಾಗೂ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣದ ಮೂಲಕ ಪಟ್ಟಣದಲ್ಲಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿ ಬೆಳೆಯುತ್ತಿದೆ. ಶಾಲೆಗೆ ಕಾಲೇಜು ಆರಂಭಿಸಲು ಪರವಾನಗಿ ದೊರೆತಿರುವುದು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಹೊಸ ಅವಕಾಶಗಳನ್ನು ತೆರೆದಂತಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ವಿದ್ಯಾರ್ಥಿಗಳು, ಶಿಕ್ಷಕರು ನೀಡಿದ ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದಲೇ ಉತ್ತಮ ಸಾಧನೆ ಮಾಡಲು ಸಾಧ್ಯವಾಯಿತು ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು. ನಂತರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳು ಹಾಗೂ ಅವರ ಸಾಧನೆಗೆ ಶ್ರಮಿಸಿದ ಶಿಕ್ಷಕರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಆಡಳಿತ ಮಂಡಳಿ ಮುಖ್ಯಸ್ಥರಾದ ಯಾಸೀನ್ ಮುಲ್ಲಾ, ದಾದಾ ಎತ್ತಿನಮನಿ, ಶಿಕ್ಷಕರು, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನಿಧನ ವಾರ್ತೆ



ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ ನಗರದ 5ನೇ ವಾರ್ಡ್ ಸೌದಾಗರ್ ಮೊಹಲ್ಲಾ ನಿವಾಸಿ ಹಿರಿಯ ಪತ್ರಕರ್ತ ಎ. ಅಬ್ದುಲ್ ನಬಿ ಬುಧವಾರ ನಿಧನರಾದರು. ಇವರಿಗೆ ಮೂವರು ಗಂಡು ಹಾಗೂ ಹೆಣ್ಣು ಮಗಳು ಇದ್ದಾರೆ. ಮೃತರ ಅಂತ್ಯ ಸಂಸ್ಕಾರವನ್ನು ನಗರದ ಖಬರಸ್ತಾನ್ ನಲ್ಲಿ ಗುರುವಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ವರದಿ: ಮಸೀದಿ,ಅಬ್ದುಲ್**

# ಮಾರ್ಗಸೂಚಿ ಅನುಸರಿಸಿ ಇಂಧನ ವಿತರಿಸಲು ಕ್ರಮ: ಜಿಲ್ಲಾಧಿಕಾರಿ ಪೂವಿತಾ ಎಸ್.

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಾಗತಿಕ ಸನ್ನಿವೇಶದ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಗ್ರಾಹಕರ ಹಿತದೃಷ್ಟಿಯಿಂದ ಇಂಧನದಲ್ಲಿ ಯಾವುದೇ ಕೊರತೆಯಾಗದಂತೆ ಮಾರ್ಗಸೂಚಿಗಳನ್ನು ಅನುಸರಿಸಿ ಇಂಧನವನ್ನು ವಿತರಿಸಲು ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ತಿಳಿಸಿದ್ದಾರೆ.**



ಪೆಟ್ರೋಲಿಯಂ ನಿಯಮ-2002ರ ನಮೂನೆ ಘಿಖಗಿರ ಷರತ್ತು 16(4)ರನ್ವಯ ಪೆಸೋ ಮಾರ್ಗಸೂಚಿ ಪ್ರಕಾರ ರಿಟೇಲ್ ಔಟ್ಲೆಟ್‌ಗಳು ವಾಹನಗಳ ಟ್ಯಾಂಕ್‌ಗಳಿಗೆ ಅಥವಾ ಅಧಿಕೃತ ಕಂಟೇನರ್‌ಗಳಿಗೆ ಗರಿಷ್ಠ ಮಿತಿ 200 ಲೀಟರ್‌ಗಳಿಗೆ ಒಳಪಟ್ಟು ಮಾತ್ರ ಇಂಧನವನ್ನು ಪೂರೈಸುವುದು. ರಿಟೇಲ್ ಔಟ್ಲೆಟ್‌ಗಳು ಬಲ್ಕ್ ಸಪ್ಲೈ ಒಪೆರಷನ್ಸ್ ಗಳನ್ನು ನಡೆಸಲು ಅಧಿಕೃತ ಮಾರಾಟಗಾರರಾಗಿರುವುದಿಲ್ಲ. ಬಲ್ಕ್ ಸಪ್ಲೈ ಒಪೆರಷನ್ಸ್ ವ್ಯಾಪಾರವನ್ನು ನಡೆಸಲು ವಿಶೇಷವಾಗಿ ಜಾರಿಯಲ್ಲಿರುವ ನೇರ ಮಾರಾಟ ಕಾರ್ಯವಿಧಾನಗಳ ಮೂಲಕ ಮಾತ್ರ ನಡೆಸತಕ್ಕದ್ದು. ಬಲ್ಕ್ ಸಪ್ಲೈ ಒಪೆರಷನ್ಸ್ ಗಳಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಲ್ಲಿ ನಿಯಮಗಳ ಉಲ್ಲಂಘನೆಯ ಜೊತೆಗೆ ಸುರಕ್ಷತೆ, ಲೈಸೆನ್ಸಿಂಗ್ ಮತ್ತು ಕಾರ್ಯಾಚರಣೆಯ ಬಗ್ಗೆ ಗಂಭೀರ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇರುತ್ತದೆ. ಪೆಟ್ರೋಲ್ ಮತ್ತು ಡೀಸೆಲ್‌ನ್ನು ವಾಹನಗಳ ಟ್ಯಾಂಕ್‌ಗಳಿಗೆ ಮಾತ್ರ ಪೂರೈಸಬೇಕಾಗಿರುತ್ತದೆ. ಬಾಟಲ್‌ಗಳು, ಕ್ಯಾನ್‌ಗಳು ಮತ್ತು ಇನ್ನಿತರೇ ಯಾವುದೇ ಕಂಟೇನರ್‌ಗಳಿಗೆ ಪೂರೈಸುವುದನ್ನು ನಿಷೇಧಿಸಲಾಗಿದೆ. ಬಲ್ಕ್ ಕನ್ಸೂಮರ್ಸ್‌ಗಳಿಗೆ ಡೀಸೆಲ್‌ನ್ನು ಕನ್ಸೂಮರ್ ಪಂಪ್ಸ್ ಅಧೀನದಲ್ಲಿ ಬರುವ ಡೈರೆಕ್ಟ್ ಸೇಲ್ಸ್ ಮೆಕ್ಯಾನಿಸ್ಮ್/ಡೆಪೊಟ್ಸ್‌ಗಳ ಮೂಲಕ ಮಾತ್ರ ಮಾರಾಟ ಮಾಡುವುದು.

ಮೇಲೆ ವಿವರಿಸಿರುವ ಅಂಶಗಳಲ್ಲಿ ಉಲ್ಲಂಘನೆ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಮತ್ತು ಇಂಧನದ ಅನಧೀಕೃತ ದಾಸ್ತಾನು ಇರಿಸುವುದು ಮತ್ತು ತಾತ್ಕಾಲಿಕ ಕೊರತೆ ಸೃಷ್ಟಿಸುವಂತಹ ಪ್ರಕರಣಗಳು ಕಂಡು ಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆ, 1955 ಮತ್ತು ಸಂಬಂಧಪಟ್ಟ ನಿಯಮಗಳಡಿ ಕಟ್ಟುನಿಟ್ಟಿನ ಕ್ರಮವಹಿಸಲಾಗುವುದು. ಪೆಟ್ರೋಲ್ ಪಂಪ್‌ಗಳಲ್ಲಿ ಶಿಸ್ತು ಮತ್ತು ಸೌಹಾರ್ದಯುತ ನಡವಳಿಕೆಯನ್ನು ಕಾಪಾಡಿಕೊಳ್ಳಲು ಮತ್ತು ಪಂಪ್ ಸಿಬ್ಬಂದಿ ಹಾಗೂ ಸಹ ನಾಗರಿಕರೊಂದಿಗೆ ಮತ್ತು ಅಗತ್ಯ ಸೇವೆಗಳ ಸುಗಮ ಕಾರ್ಯನಿರ್ವಹಣೆಯಲ್ಲಿ ಎಲ್ಲಾ ಸಾರ್ವಜನಿಕರು ಸಹಕಾರ ನೀಡುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಸ್ಕಿಯ ಆರ್. ಜೆ. ಪಾಟೀಲ್ ಅವರಿಂದ ಸಿಂಧನೂರಿನ ಕಾರುಣ್ಯಾಶ್ರಮದಲ್ಲಿ ವಿಶೇಷ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮಸ್ಕಿ ಪಟ್ಟಣದ ಪ್ರಥಮ ದರ್ಜೆ ಗುತ್ತದಾರರಾದ ರಾಮರಡ್ಡಿಗೌಡ ಪಾಟೀಲ್ (ಆರ್. ಜೆ. ಪಾಟೀಲ್ ) ಅವರ ಜನ್ಮ ಸಾರ್ಥಕ ದಿನವು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ವಿವಿಧ ಬಗೆಯ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.**




ಈ ಕಾರ್ಯಕ್ರಮದಲ್ಲಿ ಅವರ ಸಹೋದರಿಯಾದ ಶಿಲ್ಪಾ ಪಾಟೀಲ್ ಇವರ ಮಕ್ಕಳಾದ ಸಮವಿತ್ತ ಹಾಗೂ ಶಿಶಿರ ಇವರುಗಳಿಂದ ಆಶ್ರಮಕ್ಕೆ ಧನ ಸಹಾಯ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಪ್ರಥಮ ದರ್ಜೆ ಗುತ್ತೇದಾರರಾದ ಆರ್.ಜೆ.ಪಾಟೀಲ್ ಅವರನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಿ " ಕರುಣೆಯ ಕಾರುಣ್ಯ ಮೂರ್ತಿಗಳು" ಎನ್ನುವ ಅಭಿದಾನದ ಪುರಸ್ಕಾರದೊಂದಿಗೆ ಹಾರೈಸಲಾಯಿತು.

ನಂತರ ಆರ್. ಜೆ.ಪಾಟೀಲ್ ಮಾತನಾಡಿ ಸುಮಾರು ವರ್ಷಗಳಿಂದ ಕಾರುಣ್ಯ ಕುಟುಂಬದ ಸೇವೆಯಲ್ಲಿ ನಾವು ಪಾಲ್ಗೊಳ್ಳುತ್ತಿರುವುದು ನನಗೂ ಹಾಗೂ ನನ್ನ ಎಲ್ಲಾ ಸ್ನೇಹ ಬಳಗಕ್ಕೆ ಸಂತೋಷ ತಂದಿದೆ.

ನಮ್ಮ ಭಾರತೀಯ ಸಂಸ್ಕೃತಿಯನ್ನು ಸಂಸ್ಕಾರವನ್ನು ಕಾಪಾಡಬೇಕಾದರೆ ಯುವಕರೆಲ್ಲರೂ ಇಂತಹ ಸಮಾಜ ಸೇವೆಯಲ್ಲಿ ಪಾಲ್ಗೊಳ್ಳಬೇಕು. ಮತ್ತು ಇಂತಹ ವೃದ್ಧಾಶ್ರಮಗಳು ಹೆಚ್ಚಾದಂತೆಲ್ಲ ನಮ್ಮ ಸಂಸ್ಕೃತಿ ಉಳಿಯುತ್ತಿಲ್ಲ ಎಂದರ್ಥ. ಆದರೆ ಈ ಕಾರುಣ್ಯ ಆಶ್ರಮವು ಸುಮಾರು ವರ್ಷಗಳ ಹಿಂದೆ ಅನಾಥರ ಅನಿವಾರ್ಯಕ್ಕಾಗಿ ಹುಟ್ಟಿಕೊಂಡು ಹಲವಾರು ಜಾಗೃತಿಗಳನ್ನು ಮಾಡುವುದರ ಮೂಲಕ ಸಮಾಜದಲ್ಲಿನ ಹಿರಿಯ ನಾಗರಿಕರ ಘನತೆ ಗೌರವವನ್ನು ಕಾಪಾಡುತ್ತಿದೆ. ಸಮಾಜದಲ್ಲಿನ ನಾವುಗಳು ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಸಂಸ್ಕಾರದ ಪಾಠ ಪೋಷಕರಿಂದ ಆಗಬೇಕು.

ನಮ್ಮ ದೇಶವು ಹಲವಾರು ಸಂಸ್ಕೃತಿ ಸಂಸ್ಕಾರದ ಇತಿಹಾಸವನ್ನು ಹೊಂದಿದ ಈ ದೇಶದಲ್ಲಿ ಪ್ರತಿಯೊಬ್ಬರೂ ಕೂಡ ಮಾನವೀಯತೆಯನ್ನು ಹೊಂದಿರುವ ಮಾನವನಾಗಬೇಕು. ಈ ನಮ್ಮ ಕಾರುಣ್ಯ ಸಂಸ್ಥೆಯು ಅದೆಷ್ಟೋ ಬೀದಿಬದಿಯಲ್ಲಿ ಬಿದ್ದಿರುವ ಅನಾಥ ಹಿರಿಯ ವೃದ್ಧರನ್ನು ಹಾಗೂ ವಯಸ್ಕರ ಬುದ್ಧಿಮಾಂದ್ಯರನ್ನು ಸ್ವಂತ ಕುಟುಂಬದ ಹಾಗೆ ನೋಡಿಕೊಳ್ಳುತ್ತಿರುವುದು ನಮ್ಮ ಕಲ್ಯಾಣ ಕರ್ನಾಟಕಕ್ಕೆ ಗೌರವ ತಂದು ಕೊಟ್ಟಿರುವ ಉತ್ತಮ ಸಂಸ್ಥೆಯಾಗಿದೆ.

ಸಮಾಜಕ್ಕೆ ಇದು ಆಶ್ರಮವಾದರೆ ಈ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳಿಗೆ ಪದಾಧಿಕಾರಿಗಳಿಗೆ ಸ್ವಂತ ಕುಟುಂಬವಾಗಿರುವುದು ಪ್ರತಿಯೊಬ್ಬರಿಗೂ ಕೂಡ ಆದರ್ಶವಾಗಿದೆ. ಈ ಆಶ್ರಮಕ್ಕೆ ಸರ್ಕಾರವು ಮನಸ್ಸು ಮಾಡಿ ಸ್ವಂತ ಜಾಗ ಕಲ್ಪಿಸಿ ಕೊಟ್ಟರೆ ಸರ್ಕಾರಕ್ಕೂ ಕೂಡ ಗೌರವ ಸಿಕ್ಕಂತಾಗುತ್ತದೆ. ನಾವೆಲ್ಲರೂ ಕೂಡ ಕಾರುಣ್ಯ ಸಂಸ್ಥೆಯ ಪ್ರತಿಯೊಂದು ಯುವ ಕಾರ್ಯಗಳಲ್ಲಿ ಭಾಗವಹಿಸಿದ್ದರು ಮೂಲಕ ನಿಮ್ಮೊಂದಿಗೆ ನಾವು ಸದಾ ವಕಾಲವಿರುತ್ತೇವೆ. ನಿಮ್ಮೆಲ್ಲರ ಆಶೀರ್ವಾದ ನಮ್ಮ ಮೇಲೆ ಹಾಗೂ ನಮ್ಮ ಕುಟುಂಬದ ಮೇಲಿರಲಿ ಎಂದು ಮಾತನಾಡಿ ಆಶ್ರಮದ ಸೇವೆಗೆ ಪ್ರೋತ್ಸಾಹಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶರಣಬಸವ. ಚನ್ನಬಸನಗೌಡ. ಶಿಶಿರ. ಬಸವರಾಜ. ಸಮವಿತ್ತ.ಕಾರ್ತಿಕ್.ಶಿವು ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ.ಜ್ಯೋತಿ. ಮೀನಾಕ್ಷಮ್ಮ. ಲಕ್ಷ್ಮಿ. ಶರಣು ಸ್ವಾಮಿ.ಬಸವ ಸ್ವಾಮಿ. ಹಾಗೂ ಮಸ್ಕಿಯ ಆರ್. ಜೆ.ಪಾಟೀಲ್ ಅಪಾರ ಸ್ನೇಹಿತರುಗಳು ಉಪಸ್ಥಿತರಿದ್ದರು

## ನೇಮಕಾತಿ ಪ್ರಕಟಣೆ

IAF ನೇಮಕಾತಿ 2026–379 ಕಮಿಷನ್ಡ್ ಆಫೀಸರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 20, 2026 ಖಂಈ ನೇಮಕಾತಿ 2026: 142 ಕಮಿಷನ್ಡ್ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ವಾಯುಪಡೆಯು ಮೇ 2026 ರ IAF ಅಧಿಕೃತ ಅಧಿಸೂಚನೆಯ ಮೂಲಕ ಕಮಿಷನ್ಡ್ ಆಫೀಸರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 19–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 20–05–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 19–ಜೂನ್–2026 ಅಧಿಕೃತ ವೆಬ್‌ಸೈಟ್: agnipathvayu.cdac.in

## ಬೊಮ್ಮನಹಳ್ಳಿ ಶಿವರಾಜ ಮನೆಗೆ ಶ್ರೀದೇವಿ ಆರ್ ನಾಯಕ ಬೇಟಿ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಶಿವರಾಜ ಇವರ ಮನೆಗೆ ವಿದ್ಯುತ್ ಅವಘಡ ಜರುಗಿದ ಸುದ್ದಿ ತಿಳಿದು ಶಿವರಾಜ ಇವರ ನಿವಾಸಕ್ಕೆ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀದೇವಿ ಆರ್ ನಾಯಕ ಬೇಟಿ ನೀಡಿ ಕುಟುಂಬಸ್ಥರಿಗೆ ಆಹಾರ ಧಾನ್ಯಗಳನ್ನು ನೀಡುವ ಮೂಲಕ ಧನ ಸಹಾಯ ನೀಡಿದರು.**



ಸಂಬಂಧ ಪಟ್ಟ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಕೂಡಲೇ ಮನೆ ನಿರ್ಮಾಣ ಮಾಡಿಕೊಡುವಂತೆ ಹೇಳೀದರು. ಆಕುಟುಂಬದ ಮುಖ್ಯಸ್ಥರಿಗೆ ವಿವಿಧ ಮೂಲ ಸೌಕರ್ಯಗಳನ್ನು ಕೂಡಲೇ ಒದಗಿಸಿಕೊಡುವಂತೆ ಪಿಡಿಓ ಗಂಗಮ್ಮ ಕಂದಾಯ ನಿರೀಕ್ಷಕರಾದಕರಾದ ಅನಿಲಕುಮಾರ ಗ್ರಾಮಲೆಕ್ಕಾದಿಕಾರಿ ಕೆಂಚಬಸ್ಸಪ್ಪ ಇವರಿಗೆ ತಿಳಿಸಿದರು. ಸಂದರ್ಭದಲ್ಲಿ ಶಿವರಾಜನಾಯಕ, ಹನುಮಂತ್ರಾಯನಾಯಕ, ಚಂಧ್ರು ಬೊಮ್ಮನಹಳ್ಳಿ, ಸಾಬಣ್ಣಹೂಗಾರ ಗಾಣದಾಳ ತಿಮ್ಮಣ್ಣಹೊಸೂರು, ಚನ್ನಬಸವನಾಯಕ, ಭೀಮಣ್ಣ ವೀರಗೋಟ್,ತಿಮ್ಮಣ್ಣಮುರಾಳ್, ಲಿಂಗಣ್ಣನಾಯಕ ಹವಲ್ದಾರ, ರಾಮನಗೌಡಮೇಟಿ. ಹಬ್ರಾಮ್ ಕಮಲದಿನ್ನಿ ರಮೇಶಬಾಗೂರು, ಅಭಿಷೇಕ ಪೂಜಾರಿ, ಶಿವರಾಜ ಮುದಕಿ,ಬಾಲಪ್ಪನಾಯಕ, ಉದಯಮನಗಾರ, ಶರಣಬಸವ ಮ್ಯಾಕಲದೊಡ್ಡಿ, ಮೌನೇಶ ಕಕ್ಕಲದೊಡ್ಡಿ, ಪ್ರಕೃದ್ದಿನ ವಂದಲಿ, ಮನೋಜ್ ಗಾಣದಾಳ,ಸೇರಿದಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು. ಸುದ್ದಿ ಪೈಲ್ ಅರಕೇರಾ ಸಂಖ್ಯೆ 20(1) ಬೊಮ್ಮನಹಳ್ಳಿ ಗ್ರಾಮದ ಶಿವರಾಜ ಇವರ ಮನೆಗೆ ವಿದ್ಯುತ್ ಅವಘಡ ಶಿವರಾಜ ಇವರ ನಿವಾಸಕ್ಕೆ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀದೇವಿ ಆರ್ ನಾಯಕ ಬೇಟಿ ನೀಡಿ ಕುಟುಂಬಸ್ಥರಿಗೆ ಆಹಾರ ಧಾನ್ಯಗಳನ್ನು ಧನಸಹಾಯ ನೀಡಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಎಸ್‌ಎಸ್‌ಎಲ್‌ಸಿ, ಪಿಯುಸಿ ಎಸ್ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಮೇ 23ರಂದು ಪ್ರತಿಭಾ ಪುರಸ್ಕಾರ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಸಾಧನೆ ಮಾಡಿದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಕಾರ್ಯಕ್ರಮವನ್ನು ಮೇ 23ರಂದು ಶನಿವಾರ ಬೆಳಿಗ್ಗೆ 10.30ಕ್ಕೆ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಸಂಘರ್ಷ ಸಮಿತಿ (ಕಾದ್ರೋಳಿ ಬಣ) ಜಿಲ್ಲಾ ಅಧ್ಯಕ್ಷ ಭಾಲಚಂದ್ರ ಹುಲ್ಲೂರ ತಿಳಿಸಿದ್ದಾರೆ.**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು. ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದ ಎಲ್ಲಾ ಅರ್ಹ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ಕಾರ್ಯಕ್ರಮದಲ್ಲಿ



ಭಾಗವಹಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಜಂಬಗಿ ಭಾವೈಕ್ಯತಾ ಮಠ ಮದಲಿಂಗನಾಳದ ಪರಮಪೂಜ್ಯ ಶಂಕರಲಿಂಗ ಮಹಾರಾಜರು, ಹಣಮಂತ ಗುಡಿಹಾಳ ಹಾಗೂ ತಂಗಡಗಿಯ ಶ್ರೀ ಶಾಂತಪ್ಪ ಪೂಜಾರಿ ವಹಿಸಲಿದ್ದಾರೆ.

ಶಾಸಕ ಸಿ.ಎಸ್. ನಾಡಗೌಡ (ಅಪ್ಪಾಜಿ) ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ, ಬಿಜೆಪಿ ಮುಖಂಡ ಉಮೇಶ ಗೋ. ಕಾರಜೋಳ, ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ. ಅಸ್ಕಿ ಹಾಗೂ ಮಹಾಂತೇಶ ಗಂಗನಗೌಡ್ರು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಮಾಜಿ ದೌರ್ಜನ್ಯ ಸಮಿತಿ ಸದಸ್ಯ ಬಸವರಾಜ ಸಿದ್ದಾಪೂರ ಮಾತನಾಡಿ, ಜಿಲ್ಲೆಯ ಯಾವುದೇ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ.

ಕಾರ್ಯಕ್ರಮದ ದಿನ ಸಂಜೆ 5 ಗಂಟೆಯವರೆಗೆ ಹೆಸರು ನೋಂದಣಿಗೆ ಅವಕಾಶವಿದ್ದು, ಹೆಚ್ಚಿನ ಮಾಹಿತಿಗಾಗಿ 8970065665 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಧ್ವನಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಚಂದ್ರಕಾಂತ ಎಸ್. ಕಾದ್ರೋಳಿ ವಹಿಸಲಿದ್ದಾರೆ. ಜ್ಯೋತಿ ಬೆಳಗಿಸುವ ಕಾರ್ಯಕ್ರಮದಲ್ಲಿ ಪ್ರಭುಗೌಡ ದೇಸಾಯಿ, ಆರ್.ಎಸ್. ಪಾಟೀಲ, ತಹಸೀಲ್ದಾರ ಕೀರ್ತಿ ಚಾಲಕ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಬಸಂತಿ ಜಿ. ಮಠ ಭಾಗವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಶಿಕಾಂತ ಮಾಲಗತ್ತಿ, ಶಿವಪ್ಪ ಶಿವಪೂರ, ಎಂ.ವೈ. ತಳ್ಳಿಮನಿ, ಪಿ.ಬಿ. ಗುಡದಿನ್ನಿ, ಮಂಜುನಾಥಸ್ವಾಮಿ ಕುಂದರಗಿ, ತಿಪ್ಪಣ್ಣ ದೊಡಮನಿ, ಶಿವರಾಜ ಗುಂಡಕನಾಳ, ಮಹೇಶ ಸಿದ್ದಾಪೂರ, ಹಣಮಂತ ನಾಯಕಮಕ್ಕಳ ಹಾಗೂ ಭಗವಂತ ಕಬಾಡೆ ಉಪಸ್ಥಿತರಿರಲಿದ್ದಾರೆ ಎಂದು ಅವರು ಹೇಳಿದರು. ಈ ಸಂಧರ್ಭದಲ್ಲಿ ಮಲ್ಲಪ್ಪ ಬಸರಕೋಡ, ಸಂಗಮೇಶ ಢವಳಗಿ, ಶೇಕು ಆಲೂರು, ಬಸವರಾಜ ನಾಗರಭಟ್ಟ, ಪರಶುರಾಮ ಹಡಲಗೇರಿ, ಹಣಮಂತ ಚಿರ್ಚನಕಲ್, ಬಸವರಾಜ ವನಕಿಹಾಳ, ಪರಶುರಾಮ ಕವಡಿಮಟ್ಟಿ ಹಾಗೂ ಶೇಕು ಬಡವಾಟ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ವಿವಿಧ ಬೇಡಿಕೆಗಳ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಒತ್ತಾಯ



ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನಿಯಮ ರೈತರಿಗೆ ರಸಗೊಬ್ಬರ ಕೊಡಲು ಎಫ್ ಐ ಡಿ ಕಡ್ಡಾಯಗೊಳಿಸಿರುವುದರಿಂದ ಬಹಳಷ್ಟು ರೈತರು ತೊಂದರೆ ಅನುಭವಿಸುತ್ತಿದ್ದಾರೆಂದು ವಿವಿಧ ಬೇಡಿಕೆಗಳ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕ ಅಧ್ಯಕ್ಷ ವೈ. ದುರ್ಗಾ ಪ್ರಸಾದ್ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿ ಮಾತನಾಡಿದ ಅವರು ನಮ್ಮ ಭಾಗದಲ್ಲಿ ಕೆಲ ರೈತರಿಗೆ ಇನ್ನು ಎಫ್‌ಐಡಿ ನಂಬರ್ ಬಂದಿರುವುದಿಲ್ಲ.**

ನಂಬರ್ ಇದ್ದರು ಕೆಲ ರೈತರು ತಮ್ಮ ಜಮೀನು ಬೇರೆಯವರಿಗೆ ಉಳಿಮೆ ಮಾಡಲು ಕೊಟ್ಟಿರುತ್ತಾರೆ. ಇದರಿಂದ ಉಳಿಮೆ ಮಾಡುವವರಿಗೆ ರಸಗೊಬ್ಬರ ಸಿಗದೆ ತೊಂದರೆ ಅನುಭವಿಸುತ್ತಾರೆ.



**ಬೇಡಿಕೆಗಳು:** ತಾಲೂಕಿನ ರೈತ ಸಹಕಾರ ಸಂಘಗಳಲ್ಲಿ ರಸಗೊಬ್ಬರ ದಾಸ್ತಾನು ಮಾಡಬೇಕು. ಮುಂಗಾರು ಹಂಗಾಮಿಗೆ ರಸಗೊಬ್ಬರ ರೈತರಿಗೆ ಕಡಿಮೆಯಾಗದಂತೆ ನೋಡಿಕೊಳ್ಳಬೇಕು. ಕೆಬಿಜೆಎನ್‌ಎಲ್ ವತಿಯಿಂದ ಬಲದಂಡೆ ಕಾಲುವೆಗೆ ಅಳವಡಿಸುತ್ತಿರುವ ಸ್ಕಾಡಾ ಗೇಟ್ ಕಾಮಗಾರಿ ಹಾಗೂ ಡಿಸ್ಟ್ರಿಬ್ಯೂಟರ್, ಔಟ್‌ಲೇಟ್‌ಗಳ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು, ಇದರಿಂದಾಗಿ ಗೇಟ್‌ಗಳ ಕೊಚ್ಚಿಕೊಂಡು ಹೋದಾಗ ರೈತರು ನಷ್ಟ ಅನುಭವಿಸುತ್ತಾರೆ.

ಈ ಬಗ್ಗೆ ಪರಿಶೀಲಿಸಿ ಕಳಪೆ ಕಾಮಗಾರಿ ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಉತ್ತಮ ಗುಣಮಟ್ಟದ ಕಾಮಗಾರಿ ಮಾಡಲು ಆದೇಶಿಸಬೇಕು. ತಾಲೂಕಿನಾದ್ಯಂತ ಬೆಳೆಗಳಿಗೆ ತರಕಾರಿಗಳ ಮಾರಾಟ ಮಾಡುವ ರೈತರಿಗೆ ತೆರಿಗೆ ವಿಧಿಸಬಾರದು. ತಾಲೂಕಿನಲ್ಲಿ ಪ್ರಾರಂಭಿಸಲಾಗುತ್ತಿರುವ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಕೂಡಲೇ ನಿಲ್ಲಿಸಬೇಕು. ಎಲ್ಲಾ ಶಾಲೆಗಳಲ್ಲಿ ಮೂಲಭೂತ ಸಮಸ್ಯೆ ಕಾಡುತ್ತಿದೆ. ಕಾರಣ ಮೂಲಭೂತ ಸೌಲಭ್ಯಗಳಾದ ಕುಡಿಯವ ನೀರು, ಶೌಚಾಲಯದ ವ್ಯವಸ್ಥೆಯನ್ನು ಮಾಡಬೇಕು.

ತಾಲೂಕಿನಾದ್ಯಂತ ಸಂಪರ್ಕ ಕಲ್ಪಿಸುವ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಇದರಿಂದಾಗಿ ವಾಹನ ಸಂಚಾರಕ್ಕೆ ತುಂಬ ತೊಂದರೆಯಾಗುತ್ತದೆ. ಕೂಡಲೇ ತಾಲೂಕನ್ನು ಸಂಪರ್ಕಿಸುವ ಗ್ರಾಮಗಳ ರಸ್ತೆ ದುರಸ್ತಿಗೆ ಮುಂದಾಗಬೇಕು, ಈಗಾಗಲೇ ಬೇಸಿಗೆಯಾಗಿದ್ದರಿಂದ ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಕೂಡಲೇ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಬೇಕು. ಈ ಸಮಸ್ಯೆಗಳನ್ನು 15 ದಿನಗಳೊಳಗಾಗಿ ಪರಿಹರಿಸದಿದ್ದರೆ, ತಮ್ಮ ಕಛೇರಿಗೆ ರೈತರು ಹಾಗೂ ಗ್ರಾಮಸ್ಥರು ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

## ಅಂಚೆ ಇಲಾಖೆಯ ನೌಕರ ಶ್ರೀಕುಮಾರ್ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಮುಕ್ರಮ್ ಗುಂಜ್ ಉಪ ಅಂಚೆ ಕಚೇರಿಯ ಸಿಂಗನೋಡಿ ಶಾಖಾ ಅಂಚೆ ಕಚೇರಿಯಲ್ಲಿ ಸಹಾಯಕ ಶಾಖಾ ಪೋಸ್ಟ್ ಮಾಸ್ಟರ್ ಆಗಿ ಕೆಲಸ ಮಾಡುವಾಗ ಶ್ರೀಕುಮಾರ್ ಅವರು ಹಣಕಾಸಿನ ಅಕ್ರಮಗಳನ್ನು ಎಸಗಿದ್ದಾರೆ ಮತ್ತು ದಿನಾಂಕ 23.10.2021 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಇಲಾಖಾ ಕಾರ್ಯವಿಧಾನಗಳ ಪ್ರಕಾರ ಅವರ ವಿರುದ್ಧ ಸೂಕ್ತ ಕ್ರಮವನ್ನು ಏಕಪಕ್ಷೀಯವಾಗಿ ತೆಗೆದುಕೊಳ್ಳಲಾಗುತ್ತದೆ ಎಂದು ರಾಯಚೂರು ವಿಭಾಗದ ಅಂಚೆ ಇಲಾಖೆಯ ಅಂಚೆ ಅಧೀಕ್ಷಕರಾದ ಶಿವಾನಂದ ಅವರು ತಿಳಿಸಿದ್ದಾರೆ.**

ಈ ಸಂಬಂಧ ಅಂಚೆ ಇಲಾಖೆಯ, ಗ್ರಾಮೀಣ ಡಾಕ್ ಸೇವಕ (ನಡವಳಿಕೆ ಮತ್ತು ನಿಯೋಜನೆ) ನಿಯಮಗಳು, 2020 ರ ಪ್ರಕಾರ ವಿಚಾರಣಾ ಪ್ರಕ್ರಿಯೆಗಳು 10.01.2025 ರಂದು ಪೂರ್ಣಗೊಂಡಿವೆ. ಮತ್ತು ವಿಚಾರಣಾ ಅಧಿಕಾರಿ ತಮ್ಮ ವರದಿಯನ್ನು 19.03.2025 ರಂದು ಸಲ್ಲಿಸಿದ್ದಾರೆ. ವಿಚಾರಣಾ ಅಧಿಕಾರಿಯ




ವರದಿಯನ್ನು ಶ್ರೀ ಕುಮಾರ್ ಅವರ ವಸತಿ ವಿಳಾಸಕ್ಕೆ ಸ್ಪೀಡ್ ಪೋಸ್ಟ್ ಆರ್ಟಿಕಲ್ ಸಂಖ್ಯೆಗಳು ಇಏ859435199ಖಓ, ಇಏ407506693ಖಓ ಮೂಲಕ ಕಳುಹಿಸಲಾಗಿದೆ. ಆದರೆ ಅವುಗಳನ್ನು ತಲುಪಿಸದೆ ವಿಳಾಸ ಸ್ಥಳಾಂತರಿಸಲಾಗಿದೆ ಎಂದು ಹಿಂತಿರುಗಿಸಲಾಗಿದೆ.

ಲಿಂಗಸುಗೂರು ಉಪ ವಿಭಾಗದ ನಿರೀಕ್ಷಕರು ವಿಚಾರಣಾ ಅಧಿಕಾರಿಯ ವರದಿಯನ್ನು ತಲುಪಿಸಲು ಶ್ರೀ ಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿದರು. ಆದರೆ ಅವರ ನಿವಾಸವು ಲಾಕ್ ಆಗಿದೆ. ಮತ್ತು ಶ್ರೀ ಕುಮಾರ್ ಅವರ ಕುಟುಂಬವು ಜೀವನೋಪಾಯಕ್ಕಾಗಿ ಪುಣೆ (ಮಹಾರಾಷ್ಟ್ರ) ಗೆ ವಲಸೆ ಹೋಗಿದ್ದಾರೆ. ಎಂದು ವಿಚಾರಣೆಯ ಸಮಯದಲ್ಲಿ ತಿಳಿದುಬಂದಿದೆ. ಈ ಕಾರಣದಿಂದಾಗಿ, ವಿಚಾರಣಾ ಅಧಿಕಾರಿಯ ವರದಿಯನ್ನು ಶ್ರೀ. ಕುಮಾರ್ ಅವರ ನಿವಾಸದ ಬಾಗಿಲಿಗೆ ಅಂಟಿಸಲಾಗಿದೆ ಮತ್ತು ಗ್ರಾಮಸ್ಥರ ಸಮ್ಮುಖದಲ್ಲಿ ಮಹಜರು ಮಾಡಲಾಗಿದೆ. ವಿಚಾರಣಾ ಅಧಿಕಾರಿಯ ವರದಿಯನ್ನು ಶ್ರೀ ಕುಮಾರ್ ಅವರಿಗೆ ತಲುಪಿಸಲು ವಿವಿಧ ಪ್ರಯತ್ನಗಳ ಹೊರತಾಗಿಯೂ, ಅದನ್ನು ತಲುಪಿಸಲು ಸಾಧ್ಯವಾಗಲಿಲ್ಲ.

ಆದ್ದರಿಂದ ಶ್ರೀ. ಕುಮಾರ್ ಅವರಿಗೆ ಕೊನೆಯ ಅವಕಾಶವನ್ನು ನೀಡುವ ಸಲುವಾಗಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಶ್ರೀಕುಮಾರ್ ಅವರು ಈ ಪ್ರಕರಣದಲ್ಲಿ ತಮ್ಮ ಪ್ರತಿವಾದವನ್ನು ಈ ಅಧಿಸೂಚನೆಯ 15 ದಿನಗಳ ಒಳಗೆ ರಾಯಚೂರು ವಿಭಾಗದ ಅಂಚೆ ಅಧೀಕ್ಷಕರಿಗೆ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ. ಹಾಗೆ ಮಾಡಲು ವಿಫಲವಾದರೆ ಅವರ ಪ್ರತಿವಾದದಲ್ಲಿ ಯಾವುದೇ ಪ್ರಾತಿನಿಧ್ಯವನ್ನು ಹೊಂದಿಲ್ಲ ಎಂದು ಭಾವಿಸಲಾಗುತ್ತದೆ ಮತ್ತು ಇಲಾಖಾ ಕಾರ್ಯವಿಧಾನಗಳ ಪ್ರಕಾರ ಅವರ ವಿರುದ್ಧ ಸೂಕ್ತ ಕ್ರಮವನ್ನು ಏಕಪಕ್ಷೀಯವಾಗಿ ತೆಗೆದುಕೊಳ್ಳಲಾಗುತ್ತದೆ ಎಂದು ರಾಯಚೂರು ವಿಭಾಗದ ಅಂಚೆ ಇಲಾಖೆಯ ಅಂಚೆ ಅಧೀಕ್ಷಕರಾದ ಶಿವಾನಂದ ಅವರು ಪ್ರಕಟಟಣೆಯಲ್ಲಿ ತಿಳಿಸಿದ್ದಾರೆ.

## ಹುಬ್ಬಳ್ಳಿಯಲ್ಲಿ 'ರುದ್ರಾಭಿಷೇಕಂ' ಚಿತ್ರದ ಹಾಡುಗಳ ಬಿಡುಗಡೆ

ನೈಜ್ಯ ದೆಸೆ ನ್ಯೂಸ್

**ಹುಬ್ಬಳ್ಳಿ: 'ಪ್ಯಾನ್ ಇಂಡಿಯಾ ಕ್ರಿಯೇಷನ್ಸ್' ಬೆಂಗಳೂರ ಅವರ 'ರುದ್ರಾಭಿಷೇಕಂ' ಚಲನಚಿತ್ರದ 'ಇಂದಲ್ಲ ನಾಳೆ' ಮತ್ತುವ 'ಹೃದಯದ ಬಾಗಿಲ ತೆರೆದರೆ' ಎರಡು ಹಾಡುಗಳ ಬಿಡುಗಡೆ ಸಮಾರಂಭ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿಗಳ ಮಠದ ಆವರಣದಲ್ಲಿ ನೆರವೇರಿತು.**

ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಜಗದೀಶ್ ಶೆಟ್ಟರ್ ದೀಪ ಬೆಳಗಿಸಿ ಉದ್ಘಾಟಿಸಿ 'ಇಂದಲ್ಲ ನಾಳೆ' ಹಾಡಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕನ್ನಡ ಚಿತ್ರರಂಗ ಇಂದು ದೊಡ್ಡ ಮಟ್ಟಕ್ಕೆ ಬೆಳೆದಿದ್ದು, ಹಿಂದಿ ಹಾಗೂ ಇಂಗ್ಲಿಷ್ ಚಿತ್ರಗಳಿಗೆ ಸ್ಪರ್ಧೆ ನೀಡುವ ಮಟ್ಟದ ಸಿನಿಮಾಗಳು ನಿರ್ಮಾಣವಾಗುತ್ತಿವೆ. ಪ್ರೇಕ್ಷಕರು ಕನ್ನಡ ಚಿತ್ರಗಳನ್ನು ಚಿತ್ರಮಂದಿರಗಳಲ್ಲೇ ನೋಡಿ ಎಂದರು. ನಟ ವಿಜಯ ರಾಘವೇಂದ್ರ ಮಾತನಾಡಿ ಸಿದ್ಧಾರೂಢ ಮಠ ನಮ್ಮ ಕುಟುಂಬಕ್ಕೆ ಹೊಸದೇನಲ್ಲ. ಇದು ರಾಜ್‌ಕುಮಾರ್ ಮಾಮನ ಹೃದಯಕ್ಕೆ ತುಂಬ ಹತ್ತಿರವಾದ ಸ್ಥಳ, ಶಿವಣ್ಣ, ಅಪ್ಪು ಮಾಮ



ಎಲ್ಲರಿಗೂ ಅತ್ಯಂತ ಪ್ರಿಯವಾದ ಜಾಗ" ಎಂದ ಅವರು ಚಿತ್ರದಲ್ಲಿ ಮೊದಲ ಬಾರಿಗೆ ವೀರಗಾಸೆ ಕಲಾವಿದನ ಪಾತ್ರ ನಿರ್ವಹಿಸಿದ್ದು, ತಂದೆ–ಮಗನ ಪಾತ್ರದಲ್ಲಿ ಅಭಿನಯಿಸಿರುವೆ ಎಂದರು.

ನಿರ್ದೇಶಕ ವಸಂತ್‌ಕುಮಾರ್ ಮಾತನಾಡಿ, ದೈವಪರ ಹಿನ್ನೆಲೆಯ ಜನಪದ ಕಲೆಯನ್ನು ಮನೆಮನೆಗೂ ತಲುಪಿಸುವ ಉದ್ದೇಶದಿಂದ ಚಿತ್ರ ನಿರ್ಮಿಸಲಾಗಿದೆ. ದೇವನಹಳ್ಳಿ, ಗೋಕರ್ಣ, ಹೊನ್ನಾವರ, ಕುಮಟಾ, ಅಬ್ಬಕ್ಕ ಫೋರ್ಟ್ ಹಾಗೂ ಅಘನಾಶಿನಿ ಹಿನ್ನೀರು ಪ್ರದೇಶಗಳಲ್ಲಿ 50ಕ್ಕೂ ಹೆಚ್ಚು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದ್ದು ಚಿತ್ರವು ಜೂನ 16ರಂದು ತೆರೆಗೆ ಬರಲಿದೆ ಎಂದರು. ಚಿತ್ರದ ಸಂಗೀತ ನಿರ್ದೇಶಕ ವಿ. ಮನೋಹರ್, ನಿರ್ಮಾಪಕ ಚಿದಾನಂದಮೂರ್ತಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಾಳು ಮುಗಜಿಕೊಂಡಿ, ವಿನಾಯಕ ಘೋಡಕೆ, ಪತ್ರಕರ್ತ ಗಣಪತಿ ಗಂಗೊಳ್ಳಿ, ಸಂಭಾಜಿ ಕಲಾಲ್ ರಭರಮರೆಡ್ಡಿ ಪೂಜಾರ್,



ವಿನಯ್ ಪಾಟೀಲ, ಹಳೆಹುಬ್ಬಳ್ಳಿ ಪೋಲೀಸ್ ಇನ್ಸ್ಪೆಕ್ಟರ್ ಎಂ.ಎನ್.ಸಿಂಧೂರ, ನಾಯಕಿ ಪ್ರಿಯಾಂಕ ತಿಮ್ಮೇಶ, ಮಮತಾಮನು, ಮನು, ಮುತ್ತುರಾಜ್ ಟಿ ಸೇರಿದಂತೆ ಚಿತ್ರತಂಡದ ಕಲಾವಿದರು, ತಂತ್ರಜ್ಞರು ಪಾಲ್ಗೊಂಡಿದ್ದರು. ಖ್ಯಾತ ಗಾಯಕ ವಿಷ್ಣು, ಹುಬ್ಬಳ್ಳಿಯ ಗಾಯಕ ರವೀಂದ್ರ ರಾಮದುರ್ಗಕರ ಹಾಡುಗಳ ಮೂಲಕ ರಂಜಿಸಿದರು. ಇದೆ ಸಂದರ್ಭದಲ್ಲಿ ವಿಜಯ ರಾಘವೇಂದ್ರರಿಗೆ ಚಿತ್ರ ತಂಡದಿಂದ 'ನ್ಯಾಚರಲ್ ಸ್ಟಾರ್' ಬಿರುದು ನೀಡಿ ಗೌರವಿಸಲಾಯಿತು.

ಚಿತ್ರದಲ್ಲಿ ನಾಯಕರಾಗಿ ವಿಜಯ ರಾಘವೇಂದ್ರ, ನಾಯಕಿಯಾಗಿ ಪ್ರಿಯಾಂಕ ತಿಮ್ಮೇಶ, ಬಲರಾಜ್ ವಾಡಿ, ಶಂಕರ ನಾರಾಯಣ್, ಮೈಸೂರು ಬಸವರಾಜ್, ಬ್ಯಾಂಕ್‌ಪ್ರಸಾದ, ಮನು, ಬುಲೆಟ್ ವಿನು, ವಿನಯ್, ಸನತ್, ಸಂದೀಪ್, ಮಹಾಲಿಂಗ್ ಹೂಗಾರ್, ಸೌಂದರ್ಯ, ನವನೀತ, ಮಮತಾ ಮನು, ಮಂಜುಳಾ, ಧನಲಕ್ಷ್ಮಿ, ಸ್ವಾತಿ ಮೊದಲಾದವರಿದ್ದಾರೆ. ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಮುತ್ತುರಾಜ್, ವಿ.ಮನೋಹರ್ ಸಂಗೀತ , ಭಜರಂಗಿ ಮೋಹನ್ ನೃತ್ಯ ಸಂಯೋಜನೆ, ಥ್ರಿಲ್ಲರ್‌ಮಂಜು ಸಾಹಸ, ಬಾಬುಖಾನ್ ಕಲಾ ನಿರ್ದೇಶನ, ನೊಣವಿನಕೆರೆ ಕುಮಾರ ಪ್ರಸಾಧನ, ಮುತ್ತುರಾಜ್.ಟಿ ಸಂಕಲನ, ನಾಗೇಂದ್ರ, ಡಾ. ಪ್ರಭು. ಗಂಜಿಹಾಳ, ಡಾ.ವೀರೇಶ್ ಹಂಡಿಗಿ ಪಿ.ಆರ್.ಓ, ಸಹ ನಿರ್ದೇಶನ ಮನು ಮತ್ತು ಧೀರಜ್ ಅವರದಿದ್ದು, ಕೆ ವಸಂತ್‌ಕುಮಾರ್ ಕಥೆ–ಚಿತ್ರಕಥೆ ಬರೆದು ನಿರ್ದೇಶನ ಜೊತೆಗೆ ಚಿತ್ರಕ್ಕೆ ಹಾಡುಗಳನ್ನು ಬರೆದು ತತ್ವಜ್ಞಾನಿಯಾಗಿ ಅಭಿನಯಿಸಿದ್ದಾರೆ. ಕೆ. ಎನ್. ಮಂಜುನಾಥ, ಎನ್. ಜಯರಾಮಪ್ಪ, ಕೆ. ವೆಂಕಟೇಶ್, ಬಿ. ಚಿದಾನಂದಮೂರ್ತಿ, ಸುರೇಶ್‌ಬಾಬು, ಅಶ್ವಥ್‌ನಾರಾಯಣ, ಶಿವಕುಮಾರ್. ಕೆ.ಎಸ್. ರವಿಕುಮಾರ್ ಹಾಗೂ ಕುಸುಮ ವಸಂತ್‌ಕುಮಾರ ಚಿತ್ರ ನಿರ್ಮಿಸಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### Electroplater

Electroplater ಎಂಬುದು ITI ಯಲ್ಲಿ ಕಲಿಸಲಾಗುವ ತಾಂತ್ರಿಕ (Engineering Trade) ಕೋರ್ಸ್ ಆಗಿದ್ದು, ಲೋಹಗಳ ಮೇಲ್ಮೈಗೆ ವಿದ್ಯುತ್ ಪ್ರಕ್ರಿಯೆ ಮೂಲಕ ಮತ್ತೊಂದು ಲೋಹದ ಪದರ ಹಚ್ಚುವ (Metal Coating) ತಂತ್ರಜ್ಞಾನವನ್ನು ಕಲಿಸುತ್ತದೆ. ಈ ಕೋರ್ಸ್ NSQF (National Skill Qualification Framework) ಮಾನದಂಡಕ್ಕೆ ಅನುಗುಣವಾಗಿ ರೂಪಿಸಲಾಗಿದೆ. ಕೋರ್ಸ್ ಮೂಲ ಮಾಹಿತಿ ಕೋರ್ಸ್ ಹೆಸರು: Electroplater AiÉÆÃd£É: Craftsmen Training Scheme (CTS) ಅಂಗೀಕಾರ: NCVT / DGT (Skill Development Ministry) NSQF Level: ಸಾಮಾನ್ಯವಾಗಿ Level-4 / Level-5 ಕೋರ್ಸ್ ಅವಧಿ: 2 ವರ್ಷ (4 ಸೆಮಿಸ್ಟರ್) ಅರ್ಹತೆ: ಕನಿಷ್ಠ 10ನೇ ತರಗತಿ ಪಾಸ್ ವಿಜ್ಞಾನ & ಗಣಿತ ಇದ್ದರೆ ಉತ್ತಮ ವಯಸ್ಸು: 14 ವರ್ಷ ಮೇಲ್ಪಟ್ಟು Electroplater ತರಬೇತಿ ದೇಶದಾದ್ಯಂತ ಉದ್ಯಮಗಳಿಗೆ ಅಗತ್ಯವಾದ ಕೌಶಲ್ಯ ಅಭಿವೃದ್ಧಿಗಾಗಿ ನಡೆಸಲಾಗುತ್ತದೆ. Electroplater ITI ನಂತರ ಕೆಲಸ ಸಿಗುವ ಕ್ಷೇತ್ರಗಳು ಆಟೋಮೊಬೈಲ್ ಉದ್ಯಮ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಕಂಪನಿಗಳು ಆಭರಣ ಹಾಗೂ ಚಿನ್ನದ ಪ್ಲೇಟಿಂಗ್ ಘಟಕಗಳು ಉತ್ಪಾದನಾ (ಮ್ಯಾನ್ಯುಫ್ಯಾಕ್ಚರಿಂಗ್) ಕೈಗಾರಿಕೆಗಳು ಲೋಹ ಮೇಲ್ಮೈ ಸಂಸ್ಕರಣೆ (ಮೆಟಲ್ ಫಿನಿಷಿಂಗ್) ಕೈಗಾರಿಕೆಗಳು ಸರ್ಕಾರಿ ವರ್ಕ್‌ಶಾಪ್‌ಗಳು ಉದ್ಯೋಗ ಹುದ್ದೆಗಳು (Job Roles) ಎಲೆಕ್ಟ್ರೋಪ್ಲೇಟರ್ ತಂತ್ರಜ್ಞ (Electroplater Technician) ಮೇಲ್ಮೈ ಸಂಸ್ಕರಣೆ ಕಾರ್ಯನಿರ್ವಹಣಾಧಿಕಾರಿ (Surface Finishing Operator) ಲೋಹ ಲೇಪನ ತಂತ್ರಜ್ಞ (Metal Coating Technician) ಉತ್ಪಾದನಾ ಕಾರ್ಯನಿರ್ವಹಣಾಧಿಕಾರಿ (Production Operator)

## ಟ್ರಾನ್ಸಫಾರ್ಮರ್ ಅಳವಡಿಕೆ ಹಿನ್ನಲೆಯಲ್ಲಿ ಮೇ.22ರಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ-01ರ ವ್ಯಾಪ್ತಿಗೆ ಬರುವ ಆರ್‌ಸಿಆರ್ 4 ಹಾಗೂ ಆರ್‌ಸಿಆರ್ 7ರ ಫೀಡರ್‌ಗಳಲ್ಲಿ ಹೈ-ಟೆನ್ಷನ್ ಲೈನುಗಳು ಇದ್ದು, ಕುಲಸುಂಬಿ ಕಾಲೋನಿಯಲ್ಲಿ 100 ಕೆವಿಎ ಬದಲಾಗಿ 63 ಕೆವಿಎ ಟ್ರಾನ್ಸಫಾರ್ಮರ್ ಅನ್ನು ಅಳವಡಿಸುವಂತೆ ಸಾರ್ವಜನಿಕರು ಕೋರಿರುವ ಪ್ರಯುಕ್ತ ಮೇ.22ರ ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.**




ಅಂದು ಬೆಳಿಗ್ಗೆ 11ರಿಂದ ನಗರದ ನಿಜಲಿಂಗಪ್ಪ ಕಾಲೋನಿ, ಡಿಸಿ ಮನೆ, ಕುಲಸುಂಬಿ ಕಾಲೋನಿ, ಎಮ್. ಆರ್.ಎಸ್. ಕಾಲೋನಿ, ಹೊಸೂರು ಸಾಯಿಬಾಬ ಕಾಲೋನಿ, ದೇವರಾಜು ಕಾಲೋನಿ, ರಾಂಪುರ ರಸ್ತೆ, ಹೊಸೂರು, ರಾಮಾಂಜಿನೇಯ ಕಾಲೋನಿ, ಮೆಥೋಡಿಸ್ಟ್ ಚರ್ಚ್, ರೈಲ್ವೆ ಹೆಚ್‌ಟಿಆರ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ-01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಬಕ್ರೀದ್ ಹಬ್ಬದ ಪ್ರಯುಕ್ತ ಕಾನೂನು ನಿಯಮ ಪಾಲಿಸಿ: ಡಾ.ಪ್ರೋಮ್ ಸಿಂಗ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯಲ್ಲಿ ಇದೇ ಮೇ.28ರಿಂದ ನಡೆಯುವ ಬಕ್ರೀದ್ ಹಬ್ಬದ ಪ್ರಯುಕ್ತ ಪ್ರತಿಯೊಬ್ಬರು ಕಾನೂನು, ನಿಯಮ ಪಾಲಿಸಬೇಕು. ನಿಯಮ ಉಲ್ಲಂಘನೆ ಮಾಡಿದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪ ನಿರ್ದೇಶಕರಾದ ಡಾ.ಪ್ರೋಮ್ ಸಿಂಗ್ ಅವರು ತಿಳಿಸಿದ್ದಾರೆ.**

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಆದ್ಯಾದೇಶ-2020ರಡಿ ಕರ್ನಾಟಕ ರಾಜ್ಯದಲ್ಲಿ ಜಾನುವಾರು ಹತ್ಯೆ ಪ್ರತಿಬಂಧಿಸುವುದಕ್ಕಾಗಿ ಮತ್ತು ಜಾನುವಾರುಗಳ ಸಂರಕ್ಷಣೆಗಾಗಿ ಈ ಕಾಯ್ದೆ. ಈ ಕಾಯ್ದೆಯನ್ವಯ ಜಾನುವಾರು ಎಂದರೆ ಎಲ್ಲಾ ವಯಸ್ಸಿನ ಆಕಳು, ಆಕಳ ಕರು, ಹೋರಿ, ಮತ್ತು ಎತ್ತು ಹಾಗೂ ಹದಿಮೂರು ವರ್ಷದೊಳಗಿನ ಕೋಣ ಮತ್ತು ಎಮ್ಮೆಗಳನ್ನು ಸಂರಕ್ಷಣೆ ಮಾಡಬೇಕು. ಜಾನುವಾರು ಹತ್ಯೆಯ ನಿಷೇಧ ಕಾಯಿದೆಯಡಿ ಯಾವುದೇ ಕಾನೂನು, ಪದ್ಧತಿ ಅಥವಾ ಬಳಕೆಗೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಯಾವೊಬ್ಬ ವ್ಯಕ್ತಿಯೂ ಜಾನುವಾರು (ಎಲ್ಲಾ ವಯಸ್ಸಿನ ಆಕಳು, ಆಕಳ ಕರು, ಹೋರಿ ಮತ್ತು ಎತ್ತು ಹಾಗೂ ಹದಿಮೂರು ವರ್ಷದೊಳಗಿನ ಕೋಣ ಮತ್ತು ಎಮ್ಮೆ) ಹತ್ಯೆ ನಡೆಸತಕ್ಕದ್ದಲ್ಲ ಅಥವಾ ಜಾನುವಾರು ಹತ್ಯೆ ನಡೆಸುವಂತೆ ಮಾಡತಕ್ಕದ್ದಲ್ಲ.

ಅಥವಾ ಜಾನುವಾರು ಹತ್ಯೆಗಾಗಿ ಕೊಡತಕ್ಕದ್ದಲ್ಲ ಅಥವಾ ಕೊಡುವಂತೆ



ಮಾಡತಕ್ಕದ್ದಲ್ಲ ಅಥವಾ ಅನ್ಯತಾ ಯಾವುದೇ ಜಾನುವಾರನ್ನು ಉದ್ದೇಶಪೂರ್ವಕವಾಗಿ ಕೊಲ್ಲತಕ್ಕದ್ದಲ್ಲ ಅಥವಾ ಕೊಲ್ಲಲು ಕೊಡತಕ್ಕದ್ದಲ್ಲ ಅಥವಾ ಕೊಡುವಂತೆ ಮಾಡತಕ್ಕದ್ದಲ್ಲ. ಜಾನುವಾರು ಸಾಗಾಣಿಕೆಯ ಮೇಲೆ ನಿರ್ಬಂಧದಡಿ ಯಾವೊಬ್ಬವ್ಯಕ್ತಿಯೂ ಯಾವುದೇ ಜಾನುವಾರನ್ನು ರಾಜ್ಯದೊಳಗಿನ ಯಾವುದೇ ಸ್ಥಳದಿಂದ ರಾಜ್ಯದೊಳಗಿನ ಯಾವುದೇ ಸ್ಥಳಕ್ಕೆ ಜಾನುವಾರು ಹತ್ಯೆಗಾಗಿ ಸಾಗಾಣಿಕೆ ಮಾಡತಕ್ಕದ್ದಲ್ಲ ಅಥ-'ವಾ ಸಾಗಾಣಿಕೆಗಾಗಿ ಕೊಡತಕ್ಕದ್ದಲ್ಲ, ಪರಂತು ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ನಿಯಮಿಸಿದ ವಿಧಾನದಲ್ಲಿ ನಂಬಿಕಸ್ತ ಕೃಷಿ ಅಥವಾ ಪಶು ಸಂಗೋಪನೆಯ ಉದ್ದೇಶಕ್ಕಾಗಿ ಯಾವುದೇ ಜಾನುವಾರು ಸಾಗಾಣಿಕೆಯನ್ನು ಅಪರಾಧವೆಂದು ಅರ್ಥೈಸತಕ್ಕದ್ದಲ್ಲ. ರಾಜ್ಯದ ಹೊರಗೆ ಜಾನುವಾರು ಸಾಗಾಣಿಕೆಯ ಮೇಲೆ ನಿರ್ಬಂಧದಡಿ ಯಾವೊಬ್ಬ ವ್ಯಕ್ತಿಯೂ ಯಾವುದೇ ಜಾನುವಾರನ್ನು ರಾಜ್ಯದೊಳಗಿನ ಯಾವುದೇ ಸ್ಥಳದಿಂದ ರಾಜ್ಯದ ಹೊರಗೆ ಜಾನುವಾರು ಹತ್ಯೆಗಾಗಿ ಸಾಗಾಣಿಕೆ ಮಾಡತಕ್ಕದ್ದಲ್ಲ ಅಥವಾ ಸಾಗಾಣಿಕೆಗಾಗಿ ಕೊಡತಕ್ಕದ್ದಲ್ಲ,

ಪರಂತು ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ನಿಯಮಿಸಿದ ವಿಧಾನದಲ್ಲಿ ನಂಬಿಕಸ್ತ ಕೃಷಿ ಅಥ-'ವಾ ಪಶುಸಂಗೋಪನೆಯ ಉದ್ದೇಶಕ್ಕಾಗಿ ಯಾವುದೇ ಜಾನುವಾರು ಸಾಗಾಣಿಕೆಯನ್ನು ಅಪರಾಧವೆಂದು ಅರ್ಥೈಸತಕ್ಕದ್ದಲ್ಲ. ಜಾನುವಾರು ಹತ್ಯೆಗಾಗಿ ಜಾನುವಾರು ಮಾರಾಟ, ಖರೀದಿ ಅಥವಾ ವಿಕ್ರಯದ ನಿಷೇಧದಡಿ ಯಾವೊಬ್ಬ ವ್ಯಕ್ತಿಯು, ಜಾನುವಾರು ಹತ್ಯೆಗಾಗಿ ಅಥವಾ ಜಾನುವಾರನ್ನು ಹತ್ಯ ಮಾಡಲಾಗುತ್ತದೆ ಎಂದು ಗೊತ್ತಿದ್ದು ಅಥವಾ ಹಾಗೆ ನಂಬಲು ಕಾರಣವಿದ್ದಲ್ಲಿ, ಅಂತಹ ಜಾನುವಾರನ್ನು ಖರೀದಿಸತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವಿಕ್ರಯ ಮಾಡತಕ್ಕದ್ದಲ್ಲ ಅಥವಾ ಖರೀದಿಸಲು, ಮಾರಾಟ ಮಾಡಲು ಅಥವಾ ಅನ್ಯಥಾ ವಿಕ್ರಯಿಸಲು ನೀಡತಕ್ಕದ್ದಲ್ಲ ಅಥವಾ ಖರೀದಿಸುವಂತೆ,

ಮಾರಾಟ ಮಾಡುವಂತೆ ಅಥ-'ವಾ ಅನ್ಯಥಾ ವಿಕ್ರಯಿಸುವಂತೆ ಮಾಡತಕ್ಕದ್ದಲ್ಲ. ಶೋಧಿಸುವ ಅಥವಾ ಜಪ್ತಿ ಮಾಡುವ ಅಧಿಕಾರದಡಿ ಸಬ್-ಇನ್ಸಪೆಕ್ಟರ್ ದರ್ಜೆಗಿಂತ ಕಡಿಮೆಯಿಲ್ಲದ ಒಬ್ಬ ಪೋಲೀಸ್ ಅಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರಿಯು ಈ ಆದ್ಯಾದೇಶದ ಅಡಿಯಲ್ಲಿ ಅಪರಾಧ ಎಸಗಲಾಗಿದೆ ಎಂದು ನಂಬಲು ಕಾರಣವಿದ್ದಲ್ಲಿ ತನಿಖೆ ಮಾಡುವ ಮತ್ತು ಅಂತಹ ಜಾನುವಾರನ್ನು ಹಾಗೂ ಅಂಥ ಅಪರಾಧವನ್ನು ಎಸಗಲು ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಆವರಣಗಳನ್ನು ಮತ್ತು ಸಾಮಗ್ರಿಗಳನ್ನು ಜಪ್ತಿ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

ದಂಡನೆಗಳು: ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲುವಾಸ ಮತ್ತು ಒಂದು ಜಾನುವಾರಿಗೆ ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದ-'ರೆ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತ-ರಿಸಬಹುದಾದ ಜುಲ್ಮಾನೆಯಿಂದ ಅಥ-'ವಾ ಅವೆರಡರಿಂದಲೂ ದಂಡನೆಗಳು.

ಎರಡನೇಯ ಅಥವಾ ಮುಂದುವ-ರಿದ ಅಪರಾಧದ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದೇ ಆದರೆ, ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮುಂದುವರೆದ ಜುಲ್ಮಾನೆಯೊಂದಿಗೆ, ಜೊತೆಗೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲುವಾಸದಿಂದ ದಂಡಿತನಾಗತಕ್ಕದ್ದು. ಆಪಾದಿತನು, ಅಪರಾಧ ನಿರ್ಣೀತನಾದ ಮೇಲೆ, ವಶಪಡಿಸಿಕೊಂಡ ಜಾನುವಾರು, ವಾಹನ, ಆವರಣಗಳು,ಮತ್ತುಸಾಮಗ್ರಿಗಳನ್ನುನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಮಾಡತಕ್ಕದ್ದು. ಯಾರೋಬ್ಬರೂ ಈ ಆದ್ಯಾದೇಶದಲ್ಲಿನ ಯಾವುದೇ ದಂಡನೀಯ ಅಪರಾಧಕ್ಕಾಗಿ ದುಷ್ಪರೇಪಿಸಿದರೆ ಅಥ-'ವಾ ಅಂಥ ಅಪರಾಧವನ್ನು ಎಸಗಲು ಪ್ರಯತ್ನಿಸಿದರೆ, ಈ ಆದ್ಯಾದೇಶದಲ್ಲಿ ಅಂಥ ಅಪರಾಧಕ್ಕಾಗಿ ಉಪಬಂಧಿಸಿದದುಷ್ಪರೇಪಿಸಿದರೆದಂಡಿತನಾಗತಕ್ಕದ್ದು ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೂಡಲೇ ಸರ್ಕಾರ ಮಧ್ಯಸ್ಥಿಕೆವಹಿಸಿ ಭೂ ಸಂತ್ರಸ್ತ ರೈತರಿಗೆ ನ್ಯಾಯ ಒದಗಿಸಲಿ, ಇಲ್ಲವಾದಲ್ಲಿ ಹೋರಾಟ ರೂಪುರೇಷ ದೊಡ್ಡ ಮಟ್ಟದಲ್ಲಿ ಪ್ರಜ್ವಲಿಸಲಿದೆ :ಸಂಪತ್ ಕುಮಾರ ಗುಡುಗು

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ/ಕಂಪ್ಲಿ: ಮಿತ್ತಲ್‌ಗೆ ನೀಡಿದ್ದ ರೈತರ ಭೂಮಿಯನ್ನು ಕೆಐಎಡಿಬಿ ಸರ್ಕಾರದೊಂದಿಗೆ ಶಾಮಿಲಾಗಿ ಜಿಂದಾಲ್‌ಗೆ ಪರಭಾರೆ ಮಾಡಿದೆ. ಕೂಡಲೇ ಸರ್ಕಾರ ಮಧ್ಯಸ್ಥಿಕೆವಹಿಸಿ ಇಲ್ಲಿನ ಸಾವಿರಾರು ರೈತರ ಭೂಮಿಯನ್ನು ವಾಪಸ್ಸು ನೀಡಬೇಕು.**

ಇಲ್ಲವಾದಲ್ಲಿ ಸೂಕ್ತ ಭೂ ಪರಿಹಾರ ಒದಗಿಸಬೇಕು ಎಂದು ನಮ್ಮ ಕರ್ನಾಟಕ ರಕ್ಷಣಾ ವೇದಿಕೆ(ಯುವಸೇನೆ)ಯ ಕುಡತಿನಿ ಘಟಕ ಅಧ್ಯಕ್ಷ ಸಂಪತ್ ಕುಮಾರ ಆಗ್ರಹಿಸಿದರು. ಕುಡತಿನಿ ಪಟ್ಟಣದಲ್ಲಿ ಬುಧವಾರದಂದು ಭೂ ಸಂತ್ರಸ್ತ ರೈತರಿಗೆ ನ್ಯಾಯ ಸಿಗಬೇಕೆಂಬ ನಿಟ್ಟಿನಲ್ಲಿ ಕಳೆದ ಮೂರು ವರ್ಷದಿಂದ



ನಿರಂತರವಾಗಿ ಹಮ್ಮಿಕೊಂಡು ಇಂದಿಗೆ 1251ನೇ ದಿನ ಮತ್ತು 9ನೇ ದಿನದ ಉಪವಾಸ ಸತ್ಯಾಗ್ರಹ ಹೋರಾಟದಲ್ಲಿ ಭಾಗವಹಿಸಿ, ಬೆಂಬಲ ನೀಡಿದ ನಂತರ ಮಾತನಾಡಿ, ಕೆಐ-ಎಡಿಬಿಯು ಮಿತ್ತಲ್ ಕಂಪನಿಗಾಗಿ 2012ರಲ್ಲಿ ಸ್ವಾಧೀನ ಮಾಡಿಕೊಂಡಿದ್ದ ಸಾವಿರಾರು ಎಕರೆಯಷ್ಟು ಜಮೀನನ್ನು ಈಗ ಅಕ್ರಮವಾಗಿ ಜಿಂದಾಲ್ ಕಂಪನಿಗೆ ನೀಡಲಾಗಿದೆ.

ಯಾವ ಉದ್ದೇಶಕ್ಕೆ ವಶಕ್ಕೆ ಪಡೆಯಲಾಗಿತ್ತೋ ಅದೇ ಉದ್ದೇಶಕ್ಕೆ ಭೂಮಿ ಬಳಸಬೇಕಿತ್ತು. ಈಗ ಜಿಂದಾಲ್‌ಗೆ ಹಸ್ತಾಂತರ ಮಾಡುತ್ತಿರುವುದು ರೈತರ ಹಿತಾಸಕ್ತಿಗೆ ವಿರುದ್ಧವಾದೆ. ಭೂ ಪರಭಾರೆ ವಿರೋಧಿಸಿ ನಿರಂತರವಾಗಿ ಧರಣಿ ಸತ್ಯಾಗ್ರಹ ಮತ್ತು ಉಪವಾಸದ ಹೋರಾಟ ಮಾಡುತ್ತಿದ್ದಾರೆ. ಆದರೆ, ಜನಪ್ರತಿನಿಧಿಗಳು, ಅಧಿಕಾ-ರಿಗಳು ಕುಮ್ಮಕ್ಕು ನೀಡಿ ಪೊಲೀಸರ ಮೂಲಕ ಹೋರಾಟ ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ. ಭೂ ಪ್ರವೇಶದ ವೇಳೆ ಬೈಪಾಸ್ ರಸ್ತೆಯಲ್ಲಿ ರೈತರನ್ನು ತಡೆಗಟ್ಟಿ, ರೈತರಿಗೆ ನ್ಯಾಯ ಸಿಗದ ರೀತಿಯಲ್ಲಿ ಪಿತೂರಿ ನಡೆಸಲಾಗುತ್ತಿದೆ. ಎಷ್ಟೇ ಪಿತೂರಿ ಮತ್ತು ಷಡ್ಯಾಂತ್ರ ಮಾಡಿದರೂ, ರೈತರ ಹೋರಾಟ ನಿಲ್ಲದು.

ಈ ಹೋರಾಟಕ್ಕೆ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ(ಯುವಸೇನೆ)ಯ ಬೆಂಬಲ ಸದಾ ಇದೆ. ಕೂಡಲೇ ಸರ್ಕಾರ ಮಧ್ಯಸ್ಥಿಕೆವಹಿಸಿ ಭೂ ಸಂತ್ರಸ್ತ ರೈತರಿಗೆ ನ್ಯಾಯ ಒದಗಿಸಲಿ, ಇಲ್ಲವಾದಲ್ಲಿ ಹೋರಾಟ ರೂಪುರೇಷ ದೊಡ್ಡ ಮಟ್ಟದಲ್ಲಿ ಪ್ರಜ್ವಲಿಸಲಿದೆ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಜಂಗ್ಲಿಸಾಬ್, ಮೀರಿಯಲ ಶ್ರೀನಿವಾಸ, ಜಮ್ಮಯ್ಯ, ಎಂ.ಮಾರೇಶ್, ಟೈಗರ್, ರವಿ, ಅಂಬರೀಶ್, ತಿಮ್ಮಪ್ಪ, ಗಂಗಾಧರ, ಭಾವಿ ಶಿವಕುಮಾರ್, ಕಾಸಿಂ, ರಾಮಣ್ಣ, ದಿವಾಕರಬಾಬು, ವೀರಭದ್ರ, ವಿವೇಕಾನಂದ, ಹಾಲಪ್ಪ ಗಿರೀಶ್, ರೈತರು ಮತ್ತು ರೈತ ಮಹಿಳೆಯರು ಹಾಗೂ ಇತರರು ಇದ್ದರು.

## ರಾಜ್ಯ ಸಣ್ಣ ನೀರಾವರಿ ಸಚಿವರಿಂದ ತಾಲೂಕಿನಾದ್ಯಂತ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ಚಾಲನೆ: ಶಿವಕುಮಾರ .ಬಿ.ಕೆ.

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಮಾನ್ವಿ ಪ್ರಜ್ಞಾವಂತ ನಾಗರಿಕರ ವೇದಿಕೆಯ ಸಂಚಾಲಕರಾದ ಶಿವಕುಮಾರ .ಬಿ.ಕೆ. ಮಾತನಾಡಿ ರಾಜ್ಯ ಸಣ್ಣ ನೀರಾವರಿ ಸಚಿವರಾದ ಎನ್. ಎಸ್.ಬೋಸರಾಜು ತಾಲೂಕಿನ ವಿವಿಧ ಗ್ರಾಮಗಳಲ್ಲಿ 40 ಕ್ಕೂ ಹೆಚ್ಚು ಬ್ರಿಡ್ಜ್ ಕಂ ಬ್ಯಾರೇಜ್ ಹಾಗೂ ಚೆಕ್ ಡ್ಯಾಂಗಳ ನಿರ್ಮಾಣಕ್ಕೆ ತಮ್ಮ ಇಲಾಖೆಯಿಂದ ಅನುದಾನ ನೀಡಿದ್ದಾರೆ.**

ಹಾಗೂ ಪ್ರಮುಖವಾಗಿ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊರವಿ ಮತ್ತು ಮಾನ್ವಿ ರಸ್ತೆಯಲ್ಲಿನ ಹಿರೇಹಳ್ಳಕ್ಕೆ ನಿರ್ಮಿಸಲಾಗುತ್ತಿರುವ ಬ್ರಿಡ್ಜ್ ಕಂ ಬ್ಯಾರೇಜ್, ರಬ್ಬಣಕಲ್ ನಿಂದ ಕೊರವಿ ಹಳ್ಳಕ್ಕೆ ನಿರ್ಮಿಸಲಾಗುತ್ತಿರುವ ಬ್ರಿಡ್ಜ್ ಕಂ ಬ್ಯಾರೇಜ್, ಕಾತರಕಿಯಲ್ಲಿ ನಿರ್ಮಿಸಲಾಗುತ್ತಿರುವ




ಬ್ರಿಡ್ಜ್ ಕಂ ಬ್ಯಾರೇಜ್, ಮಾನ್ವಿ ಪಟ್ಟಣದ ಆರ್.ಜಿ.ಕ್ಯಾಂಪ್ ಹತ್ತಿರದ ಹಳ್ಳಕ್ಕೆ ನಿರ್ಮಿಸಲಾಗುತ್ತಿರುವ ಬ್ರಿಡ್ಜ್ ಕಂ ಬ್ಯಾರೇಜ್ ನಿಂದಾಗಿ ಈ ಭಾಗದ ಸುತ್ತ ಮುತ್ತ ಗ್ರಾಮಗಳ ಜನರ ಸಂಚಾರಕ್ಕೆ ಅನುಕೂಲವಾಗುತ್ತದೆ.

ಹಾಗೂ ಬ್ರಿಡ್ಜ್ ಕಂ ಬ್ಯಾರೇಜ್ ನಿಂದಾಗಿ ನೀರು ಸಾದಕಾಲ ನಿಲ್ಲವುದರಿಂದ ಈ ಭಾಗದಲ್ಲಿ ಅಂತರ್ಜಲ ಮಟ್ಟ ಸುಧಾರಣೆಯಾಗಲಿದೆ. ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ದೊರೆಯುತ್ತದೆ ಅದ್ದರಿಂದ ಕಾಮಗಾರಿಗಳನ್ನು ಬೇಗಾನೆ ಪೂರ್ಣಗೊಳಿಸಿದಲ್ಲಿ ಸಾರ್ವಜನಿಕ-ರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಜೋತೆಗೆ ಬ್ರಿಡ್ಜ್ ಕಂ ಬ್ಯಾರೇಜ್‌ಗೆ ಅಗತ್ಯ ಸಂಪರ್ಕ ರಸ್ತೆ ನಿರ್ಮಿಸಿದಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲವಾಗುತ್ತದೆ ಮಾನ್ವಿ ತಾಲೂಕಿನಿಂದ ಮುಖ್ಯ ನಗರಗಳಿಗೆ ಹೋಗುವುದಕ್ಕೆ ಅನುಕೂಲವಾಗುವುದರಿಂದ ಈ ಭಾಗದ ಆರ್ಥಿಕ ಪ್ರಗತಿಗೆ ಸಾಹಕಾರಿಯಾಗುತ್ತದೆ.

ಕಾಮಗಾರಿ ಪೂರ್ಣಗೊಂಡ ನಂತರ ಉದ್ಘಾಟನೆ ಮಾಡುವ ಕಾರ್ಯಕ್ರಮದ ಸಮಯದಲ್ಲಿ ಜನರಿಗೆ ಅನುಕೂಲ ಮಾಡಿಕೊಟ್ಟಿರುವುದಕ್ಕಾಗಿ ಮಾನ್ವಿ ಪ್ರಜ್ಞಾವಂತ ನಾಗರಿಕರ ವೇದಿಕೆಯ ವತಿಯಿಂದ ರಾಜ್ಯ ಸಚಿವರಾದ ಎನ್.ಎಸ್.ಬೋಸರಾಜು ಹಾಗೂ ರಾಯಚೂರು ಗ್ರಾಮಿಣ ಶಾಸಕರಾದ ಬಸವನಗೌಡ ದದ್ದಲ್ ರವರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ತಿಳಿಸಿದರು. ಲಕ್ಷ್ಮಣ ಕೋನಾಪುರ ಪೇಟೆ, ಹನುಮಂತ ಕೊರವಿ ಇದ್ದರು.

## ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ವ್ಯಾಪ್ತಿಯಲ್ಲಿ 08 ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್ ಲೈನ್ ಮುಖಾಂತರ ಪ್ರಕಟಣೆ ಹೊರಡಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಖಾಲಿ ಇರುವ ಹುದ್ದೆಗಳ ವಿವರ: ಅರಬ್ ಮೊಹಲ್ಲಾ-03ರ ಅಂಗನವಾಡಿ ಕೇಂದ್ರದಲ್ಲಿ 1 ಕ್ರಷ್ ಅಂಗನವಾಡಿ ಕಾರ್ಯಕರ್ತೆ, 1 ಅಂಗನವಾಡಿ ಸಹಾಯಕಿ ಹುದ್ದೆ, ಪಂಚಬಿಬಿಪಹಾಡ-01ರ ಅಂಗನವಾಡಿ ಕೇಂದ್ರದಲ್ಲಿ 1 ಕ್ರಷ್ ಅಂಗನವಾಡಿ ಕಾರ್ಯಕರ್ತೆ, 1 ಅಂಗನವಾಡಿ ಸಹಾಯಕಿ ಹುದ್ದೆ, ಎಲ್.ಬಿ.ಎಸ್.ನಗರ-02ರ ಅಂಗನವಾಡಿ ಕೇಂದ್ರದಲ್ಲಿ 1 ಕ್ರಷ್ ಅಂಗನವಾಡಿ ಕಾರ್ಯಕರ್ತೆ, 1 ಅಂಗನವಾಡಿ ಸಹಾಯಕಿ ಹುದ್ದೆ, ಆಶೋಕ ನಗರ-02ರ ಅಂಗನವಾಡಿ ಕೇಂದ್ರದಲ್ಲಿ 1



ಕ್ರಷ್ ಅಂಗನವಾಡಿ ಕಾರ್ಯಕರ್ತೆ, 1 ಅಂಗನವಾಡಿ ಸಹಾಯಕಿ ಹುದ್ದೆ, ರಾಮನಗರ-01ರ ಅಂಗನವಾಡಿ ಕೇಂದ್ರದಲ್ಲಿ 1 ಕ್ರಷ್ ಅಂಗನವಾಡಿ ಕಾರ್ಯಕರ್ತೆ,

1 ಅಂಗನವಾಡಿ ಸಹಾಯಕಿ ಹುದ್ದೆ, ಹುಂಡೇಕಾರ ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ 1 ಕ್ರಷ್ ಅಂಗನವಾಡಿ ಕಾರ್ಯಕರ್ತೆ, 1 ಅಂಗನವಾಡಿ ಸಹಾಯಕಿ ಹುದ್ದೆ, ಯರಮರಸ್ ಕ್ಯಾಂಪ್-01ರ ಅಂಗನವಾಡಿ ಕೇಂದ್ರದಲ್ಲಿ 1 ಕ್ರಷ್ ಅಂಗನವಾಡಿ ಕಾರ್ಯಕರ್ತೆ, 1 ಅಂಗನವಾಡಿ ಸಹಾಯಕಿ ಹುದ್ದೆ, ಹೊಸ ಆಶ್ರಯ ಕಾಲೋನಿ-02ರ ಅಂಗನವಾಡಿ ಕೇಂದ್ರದಲ್ಲಿ 1 ಕ್ರಷ್ ಅಂಗನವಾಡಿ ಕಾರ್ಯಕರ್ತೆ, 1 ಅಂಗನವಾಡಿ ಸಹಾಯಕಿ ಹುದ್ದೆಗೆ ಅರ್ಹ ಆಸಕ್ತರು ಮೇ.25ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅಭರ್ಥಿಯು ಸ್ಥಳಿಯು ಅಂಗನವಾಡಿ ಕಂ ಕ್ರಷ್ ಕೇಂದ್ರದ ಸರ್ವೆ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಪಟ್ಟ ಅಂಗನವಾಡಿ ಕೇಂದ್ರದ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯಿಂದ ಸರ್ವೆ ವ್ಯಾಪ್ತಿಯಲ್ಲಿರುವ ಬಗ್ಗೆ ದೃಡೀಕರಣ ಪಡೆದು ಸಲ್ಲಿಸುವುದು. ಅಭ್ಯರ್ಥಿಯು ಮಹಿಳೆ ಆಗಿರಬೇಕು.

ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷ ಮಂಡಳಿ ನಡೆಸುವ 10ನೇ ತರಗತಿಯಲ್ಲಿ ತೇರ್ಗಡೆ ಆಗಿರುವವರನ್ನು ಅಥವಾ ತತ್ಸಮಾನ ವಿಧ್ಯಾರ್ಹತೆ ಹೊಂದಿರಬೇಕು. ಮತ್ತು ಸದರಿ ವಿಧ್ಯಾರ್ಹತೆಯ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ ಕನಿಷ್ಠ 7ನೇ ತರಗತಿ ಪಾಸಾಗಿರುವ ಅಭ್ಯರ್ಥಿಯನ್ನು ಪರಿಗಣಿಸಬಹದು. ವಯೋಮಿತಿ, ಅರ್ಜಿಸಲ್ಲಿಸಲು ನೇಮಕಾತಿ ಅಧಿಸೂಚನೆ ಹೊರಡಸಿದ ದಿನಾಂಕಕ್ಕೆ ಕನಿಷ್ಠ 18 ವರ್ಷ ಪೂರ್ಣಗೊಂಡಿರಬೇಕು ಮತ್ತು ಗರಿಷ್ಠ 35 ವರ್ಷ ಮೀರಿರಬಾರದು. ವಿಧವೆಯರು ಮತು ತಅಂಗವಿಕಲರಿಗೆ 10ವರ್ಷ ವಯೋಮಿತಿಯಲ್ಲಿ ರಿಯಾಯಿತಿ ಇರುತ್ತದೆ.

ಅಭ್ಯರ್ಥಿಯು 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ/ಕನ್ನಡವನ್ನು ಒಂದು ಬಾಷಾ ವಿಷಯವಾಗಿ ಓದಿರಬೇಕು. ಆಪೇಕ್ಷಿತ ವಿಧ್ಯಾರ್ಹತೆ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 6 ತಿಂಗಳಿಂದ 6 ವರ್ಷದ ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನಿಷ್ಠ 6 ತಿಂಗಳ ಅವಧಿಯ ವಿಷಯವನ್ನು ಅಥವಾ ತರಬೇತಿಯನ್ನು ಪಡೆದಿರಬೇಕು. ಆಧ್ಯತೆ ಗುಂಪು ರಾಷ್ಟ್ರೀಯ ಶಿಶು ಪಾಲನಾ ಕೇಂದ್ರದಲ್ಲಿ ಸೇವ ಸಲ್ಲಿಸಿರುವ ಶಿಕ್ಷಕಿ ಹಾಗೂ ಸಹಾಯಕಿ, ವಿಧವೆಯರು, ವಿಷೇಶ ಚೇತನರು (ಕನಿಷ್ಠ ಶೇಕಡಾ 40 ಗರಿಷ್ಠಶೇಕಡಾ 60 ರಷ್ಟು ವಿಕಲಚೇತನರು ಮಾತ್ರ ಪರಿಗಣಿಸಲಾಗುವುದೆಂದು ರಾಯಚೂರು ಶಿಶು ಅಭಿವೃದ್ಧಿ ಯೋಜನಾಧಿಕಾ-ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.